# ಮಹಿಳಾ ವಿಶೇಷ

## MAHILA VISHESHA

RNI No. KARKAN/2015/71642

ಕನ್ನಡ ತಿಂಗಳ ಪತ್ರಿಕೆ KANNADA MONTHLY ಏಪ್ರಿಲ್ April 1-30 -2019

Vol: 4 Issue : 8 (44) Pages : 16 Price: Rs.10/-

ಸಂಪುಟ: 4 ಸಂಚಿಕೆ: 8 ಪುಟ : 16 ಬೆಲೆ: ರೂ. 10/–



ಸಂಪಾದಕರು: ಹೆಚ್.ವಿ. ವೆಂಕಟಸುಬ್ಬರಾವ್ ಮೊಬೈಲ್ 9243584444 / 8880334444


## ಯುಗಾದಿ ಹಬ್ಬದ ಶುಭಾಶಯಗಳು



ಒಳ ಪುಟಗಳಲ್ಲಿ....


ಪತ್ರೆಗಳ ಮಾಹಿತಿ– ದಾಳಿಂಬೆ 2

ಯುಗಾದಿ ಹಬ್ಬ 4

ವಿದೇಶಿ ಭಾಷೆ ಕಲಿಕೆಯಿಂದ ಉತ್ತಮ ಭವಿಷ್ಯ 6

ನಾಣ್ಯಗಳ ಫ್ಯಾಷನ್ 7

ತೋಟಕ್ಕೆ ಬಂದ ನೆಂಟ; ಮನೆಗೆ ಬಂದ ಚಿಂಟು 8

ಗ್ರಾಮದೇವತೆಗಳು: ಸ್ತ್ರೀ ಚೈತನ್ಯದ ಪ್ರತೀಕ 11

ಕ್ಯಾರೇಟ್‌ನಿಂದ ಸೌಂದರ್ಯ ವರ್ಧನೆ 14

ತಲೆಗೂದಲ ಮ್ಯೂಸಿಯಂ 15




ಯುಗ ಯುಗಾದಿ ಕಳೆದರೂ,
ಯುಗಾದಿ ಮರಳಿ ಬರುತ್ತಿದೆ

ಚಾಂದ್ರಮಾನ ಯುಗಾದಿ, ದೇವಾಂಗ ದಾಸಿಮಯ್ಯ ಜಯಂತಿ, ಕುರುಬ ಜಯಂತಿ, ಶ್ರೀರಾಮನವಮಿ, ಡಾ. ಅಂಬೇಡ್ಕರ್ ಜಯಂತಿ, ಶುಕ್ರ ಜಯಂತಿ, ಮಹಾವೀರ ಜಯಂತಿ, ಗುಡ್ ಫ್ರೈಡೆ, ಹೋಲಿ ಸಾಟರ್‌ಡೇ, ಷಾಬೆ-ಬರಾತ್ ಪ್ರಯುಕ್ತ ಎಲ್ಲಾ ಓದುಗರಿಗೂ ಶುಭಾಶಯಗಳು

# 21 ಪತ್ರೆಗಳ ಮಾಹಿತಿ



ಗಣೇಶ ಚತುರ್ಥಿಯ ಶುಭಾಶಯಗಳು. ಗಣೇಶನ ಪೂಜೆಯನ್ನು ಮಾಡುವಾಗ ಅರ್ಚನೆಯಲ್ಲಿ 21 ಬಗೆಯ ಪತ್ರೆ ಅಥವಾ ಎಲೆಗಳ ವಿಧ್ಯುಕ್ತ ಪಾತ್ರವಿದೆ. ಇವು ಔಷಧಿಯ ಗುಣಗಳಿಂದಲೂ ಕೂಡಿದ್ದು, ಆಯುರ್ವೇದದಂಥ ಪ್ರಾಚೀನ ವೈದ್ಯ ಪದ್ಧತಿಯಲ್ಲಿ ಇಂದಿಗೂ ಪರಿಣಾಮಕಾರಿಯಾಗಿ ಬಳಕೆಯಾಗುತ್ತಿವೆ. ವೇದ–ಪುರಾಣ–ಜಾನಪದ ಕಥನ ರಾಶಿಯಲ್ಲಿ ಇವುಗಳ ಉಲ್ಲೇಖಗಳು ಹೇರಳವಾಗಿವೆ. ಒಂದೊಂದೇ ಪತ್ರೆಗಳ ಮಾಹಿತಿಯನ್ನು ನೀಡುವುದೇ ನಮ್ಮ ಉದ್ದೇಶವಾಗಿದೆ.

## 21. ದಾಳಿಂಬೆ



ದಾಳಿಂಬೆಯ ತವರೂರು ಇರಾನ್ ವರಾಹ ಮಿಹಿರನ (17ನೇ ಶತಮಾನ) 'ಬೃಹತ್ ಸಂಹಿತೆ'ಯಲ್ಲಿ ಇದರ ಉಲ್ಲೇಖವಿದೆ. ಈಜಿಪ್ಟ್, ಸಿರಿಯಾಗಳಲ್ಲಿ ದಾಳಿಂಬೆ ಪವಿತ್ರತೆಯ ಸಂಕೇತವಾದ್ದರಿಂದ ಅಲ್ಲಿನ ಪುರಾತನ ಮಣ್ಣಿನ ಪಾತ್ರೆಗಳು ಮತ್ತು ನಾಣ್ಯಗಳ ಮೇಲೆ ಇಂದಿಗೂ ದಾಳಿಂಬೆಯ ಚಿತ್ರಗಳಿವೆ.

'ಪೊಮೆಗ್ರಾನಟ್' ಎಂಬ ಹೆಸರು ಫ್ರೆಂಚ್ ಭಾಷೆಯಿಂದ ಬಂದಿದೆ. ಮಲಾಮ್ ಪುನಿಕಮ್ ಎಂದರೆ, ಧಾನ್ಯಭರಿತ ಸೇಬು, ಹೀಗೆ ದಾಳಿಂಬೆಯ ಬೀಜಗಳನ್ನು ಧಾನ್ಯಕ್ಕೆ ಹೋಲಿಸಲಾಗಿದೆ. ಕೆಲವು ದೇವಸ್ಥಾನಗಳ ದಾರು ಕೆತ್ತನೆಯಲ್ಲಿ ದಾಳಿಂಬೆಯ ಚಿತ್ರಗಳನ್ನು ಕಾಣ ಬಹುದು. ಪಾರ್ಸಿ ಜನರು ದಾಳಿಂಬೆಯ ಕೊಂಬೆಗಳನ್ನು ಪವಿತ್ರ ಚಾಮರಕ್ಕಾಗಿ ಬಳಸುತ್ತಾರೆ. ಅವರ ಸಮಾಜದಲ್ಲಿ ಜನಿವಾರ ಧಾರಣೆ ಸಂದರ್ಭದಲ್ಲಿ ಮಗುವಿಗೆ ಕೆಟ್ಟ ದೃಷ್ಟಿ ತಾಕದಿರಲೆಂದು ದಾಳಿಂಬೆಯ ಬೀಜಗಳನ್ನು ಪ್ರೋಕ್ಷಿಸುತ್ತಾರೆ. ಮರಣ ಸಮಯದಲ್ಲಿ ದಾಳಿಂಬೆ ರಸ 'ಚರಕ' ಮತ್ತು 'ಸುಶ್ರುತ' ಸಂಹಿತೆಗಳಲ್ಲಿ ದಾಳಿಂಬೆ ಹಣ್ಣಿನ ಔಷಧೀಯ ಗುಣಗಳ ಬಗ್ಗೆ ಉಲ್ಲೇಖವಿದೆ.

ದಾಳಿಂಬೆಯು ಪೊದೆಯಂತೆ ಬೆಳೆಯುವ ಚಿಕ್ಕಮರ, ಈ ಗಿಡದ ಹಣ್ಣು ಹಣ್ಣಿನ ತಿರುಳು, ಕಾಂಡ, ತೊಗಟೆಗಳು ಎಲ್ಲವೂ ಔಷಧಿಯುಕ್ತ.

**ಔಷಧೀಯ ಗುಣಗಳು**

* ಬಾಯಾರಿಕೆ ತಗ್ಗಿಸಲು ದಾಳಿಂಬೆಯ ರಸ ಉತ್ತಮವಾದ ಪಾನೀಯ.
* ಜ್ವರಪೀತರಿಗೆ ದಾಳಿಂಬೆ ರಸ ಮತ್ತು ಸಕ್ಕರೆ ಸೇರಿಸಿ ತಯಾರಿಸಿದ ಗ್ರೆನೆಡಿನ್ ಎಂಬ ತಂಪು ಪಾನೀಯ ನೀಡಿದರೆ ಉತ್ತಮ ಪರಿಣಾಮ.
* ಮೂಗು ಮತ್ತು ವಸಡುಗಳಲ್ಲಿ ರಕ್ತಸ್ರಾವವಾಗುತ್ತಿದ್ದರೆ ದಾಳಿಂಬೆ ಹೂಗಳ ಸೇವನೆ ಮಾಡಬೇಕು.
* ಆಮಶಂಕೆ ಮತ್ತು ರಕ್ತಭೇದಿಯಿರುವಾಗ ದಾಳಿಂಬೆಯ ತಾಜಾ ಹಣ್ಣನ್ನು ತಿನ್ನಬೇಕು.
* ಮೂತ್ರ ಕಟ್ಟಿದ್ದಲ್ಲಿ ದಾಳಿಂಬೆಯ ರಸ ಕುಡಿಯಬೇಕು.
* ಹೃದ್ರೋಗ, ಜಠರದ ತೊಂದರೆ, ಕಾಮಾಲೆ ಪೀಡಿತರಿಗೂ ದಾಳಿಂಬೆ ಸೇವನೆ ಒಳ್ಳೆಯದು.
* ಜಂತುಹುಳು ಬಾಧಿಸಿದಾಗ ಬೇರಿನ ತೊಗಟೆಯ ಕಷಾಯ ಸೇವಿಸಬೇಕು.
* ಹೊಟ್ಟೆನೋವು, ಹಲ್ಲು ನೋವಿದ್ದರೆ ದಾಳಿಂಬೆ ಹೂವಿನ ರಸದಿಂದ ಶಮನವಾಗುತ್ತದೆ.
* ಅಜೀರ್ಣವಾಗಿದ್ದರೆ ದಾಳಿಂಬೆ ರಸಕ್ಕೆ ಒಂದು ಚಮಚದಷ್ಟು ಜೀರಿಗೆಪುಡಿ ಸೇರಿಸಿ ಕುಡಿಯಬೇಕು.
* ಕೆಮ್ಮು ಇರುವಾಗ ದಾಳಿಂಬೆ ರಸಕ್ಕೆ ಜೇನುತುಪ್ಪ ಬೆರೆಸಿ ಕುಡಿಯಬೇಕು.
* ಅಲರ್ಜಿಯ ತೊಂದರೆಯಿದ್ದಲ್ಲಿ ದಾಳಿಂಬೆಯನ್ನು ಕಲ್ಲುಸಕ್ಕರೆಯೊಂದಿಗೆ ಸೇವಿಸಬೇಕು.
* ಗಂಟಲು ನೋವಿದ್ದರೆ ಈ ಹಣ್ಣಿನ ತೊಗಟೆಯ ಕಷಾಯದಿಂದ ಬಾಯಿ ಮುಕ್ಕಳಿಸಬೇಕು.
* ನರಗಳ ತೊಂದರೆಯಿದ್ದರೆ ದಾಳಿಂಬೆ ಹಣ್ಣಿನ ಸೇವನೆಯಿಂದ ಉಪಶಮನ ಲಭಿಸುತ್ತದೆ.
* ಗಾಯ ಮತ್ತು ವ್ರಣಗಳಿಗೆ ಬೇರನ್ನು ಅರೆದು ಲೇಪಿಸಿದರೆ ಉತ್ತಮ ಪರಿಣಾಮ
* ತಲೆನೋವಿರುವಾಗ ದಾಳಿಂಬೆ ಗಿಡದ ಬೇರನ್ನು ನೀರಿನಲ್ಲಿ ಅರೆದು ಹಣೆಗೆ ಲೇಪಿಸಿದರೆ ಕಡಿಮೆಯಾಗುತ್ತದೆ.
* ಮೈಮೇಲೆ ಗುಳ್ಳೆಗಳೆದಿದ್ದರೆ ದಾಳಿಂಬೆ, ಜೀರಿಗೆ, ದನಿಯಾ 24 ಗಂಟೆ ನೀರಿನಲ್ಲಿ ನೆನೆಸಿಟ್ಟು ಅನಂತರ ಬೆಲ್ಲ ಬೆರೆಸಿ ಕುಡಿದರೆ ಉಪಶಮನ ದೊರೆಯುತ್ತದೆ.

ಸುಟ್ಟ ಗಾಯಗಳಿಗೆ ದಾಳಿಂಬೆ ಎಲೆಗಳನ್ನು ಅರೆದು ಲೇಪಿಸಬೇಕು.

**ಅಡುಗೆಯಲ್ಲಿ:** ದಾಳಿಂಬೆಯಿಂದ ಸಿರಪ್, ಚಟ್ನಿ, ಕೋಸಂಬರಿ ತಯಾರಿಸಬಹುದು.

## ನನ್ನ ಮಾತು





# ಗೆಲ್ಲೋರು ಯಾರು...?

ಲೋಕಸಭಾ 2019ರ ಚುನಾವಣೆಯ ರಂಗು ದಿನೇ ದಿನೇ ಏರುತ್ತಿದೆ. ಎಲ್ಲಾ ಪಕ್ಷಗಳು ತಂತ್ರ, ಕುತಂತ್ರ, ಪ್ರತಿತಂತ್ರಗಳನ್ನು ಹೆಣೆಯುವಲ್ಲಿ ನಿಪುಣರಾಗಿದ್ದಾರೆ. ಕೆಲ ಕ್ಷೇತ್ರಗಳಲ್ಲಿ ಏನು ಆಗಬಾರದೋ ಅದು ಆಗಬಹುದೆಂಬ ಮಟ್ಟಕ್ಕೆ ಹೋಗುತ್ತಿದೆ. ಮತದಾರ ಎಷ್ಟೇ ಬುದ್ಧಿವಂತನಾಗಿದ್ದರೂ ಮನಸ್ಸನ್ನು ಚಂಚಲಿಸುವಲ್ಲಿ ನಾಯಕರುಗಳ ಪಾತ್ರ ಜಾಸ್ತಿಯಾಗುತ್ತಿದೆ. ಚುನಾವಣೆ ಹೇಗೆ ಪೂರ್ಣಗೊಳ್ಳುತ್ತದೆ ಎಂಬುದರ ಬಗ್ಗೆ ಬಹಳ ಕುತೂಹಲವುಂಟಾಗಿದೆ.

ಕಳೆದ 35–40 ವರ್ಷಗಳ ಹಿಂದಕ್ಕೆ "ಅಪ್ಪ ಹಾಕಿದ ಆಲದ ಮರಕ್ಕೆ ಏಕೆ ಜೋತು ಬೀಳುತ್ತೀಯೆ?" ಎನ್ನುವ ಮಾತಿತ್ತು. ಅಂದರೆ ಶಾನುಭೋಗರ ಮಗ ಶಾನುಭೋಗ, ಪಟೇಲರ ಮಗ ಪಟೇಲ, ಮೇಷ್ಟ್ರ ಮಗ ಮೇಷ್ಟ್ರು, ಟೈಲರ್ ಮಗ ಟೈಲರ್ ಹೀಗೆ ಮಾತನಾಡಿಕೊಳ್ಳುತ್ತಿದ್ದರು. ಆಗ ಹಂಗಿಸುವಂತೆ ಮಾತನಾಡುತ್ತಿದ್ದರು. ಆದರೆ ಈಗ ಏನಾಗುತ್ತಿದೆ ಎಂಬುದನ್ನು ಜನಸಾಮಾನ್ಯರು ನೋಡುತ್ತಿದ್ದಾರೆ. ಆಗ ಬೇರೆಯವರಿಗೆ ಅವಕಾಶ ಸಿಗಲಿ ಎನ್ನುತ್ತಿದ್ದರು. ಈಗ ಹಾಗಿಲ್ಲ. ಈಗ ಮಾತನಾಡಬಾರದು ಸುಮ್ಮನೆ ಕೇಳಿಸಿಕೊಂಡಿರಬೇಕು.

ರಾಜಕೀಯ ಪಕ್ಷಗಳು ಪ್ರಚಾರಕ್ಕೆ ಇಳಿದಿರುವುದನ್ನು ನೋಡಿದರೆ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಹಲವಾರು ಸಮಸ್ಯೆಗಳನ್ನು ನಿವಾರಿಸಲು ಅಲ್ಲದೆ, ಸೌಲಭ್ಯಗಳನ್ನು ಕಲ್ಪಿಸಲು ಪ್ರಚಾರವೇ ಇಲ್ಲ. ನಾಡಿನ ಜನರ ಸಂಕಷ್ಟಗಳನ್ನು ಪರಿಹರಿಸುವಲ್ಲಿ ಈ ರೀತಿಯ ಪ್ರಚಾರ ಮಾಡಿದರೆ ಸೌಲಭ್ಯಗಳು ಕಟ್ಟಕಡೆಯ ವ್ಯಕ್ತಿಗೂ ಕೂಡ ಸಲ್ಲುತ್ತದೆ. ಈಗ ಜನರ ಮಧ್ಯೆ ಓಡಾಡುವ ರಾಜಕೀಯ ನಾಯಕರುಗಳು ಚುನಾವಣೆ ಮುಗಿದ ಬಳಿಕ ಜನರಿಂದ ದೂರ. ಇದು ಜನರಿಗೆ ಅರ್ಥವಾಗಿದ್ದರೆ ಈಗ ಸರಿಯಾದ ಸಮಯ. ನಿಮಗೆ ಬೇಕಾದ ಹಾಗೆ ಉಪಯೋಗಿಸಿಕೊಳ್ಳಿ.

ನಮ್ಮ ಸುತ್ತಮುತ್ತ ಜನ ಮಾತನಾಡಿಕೊಳ್ಳುತ್ತಿರುವುದೇನೆಂದರೆ ಪ್ರಚಾರ ಏಕೆ ಬೇಕು? ಚುನಾವಣೆಗೆ ನಿಂತಿರುವವರು ಯಾರು? ಏನು ಮಾಡುತ್ತಿದ್ದಾರೆ? ಹಿಂದೆ ಏನು ಮಾಡುತ್ತಿದ್ದರು? ಹಾಗು ಅವರ ಬಗ್ಗೆ ಎಲ್ಲಾ ವಿಚಾರಗಳು ಗೊತ್ತಿರುವುದರಿಂದ ಪ್ರಚಾರದ ಅವಶ್ಯಕತೆ ಇಲ್ಲ. ಪ್ರಚಾರದಿಂದ ಶಬ್ದಮಾಲಿನ್ಯ, ಸಮಯಕ್ಕೆ ಬೆಲೆ ಇಲ್ಲ. ಪ್ರಚಾರದ ಸ್ಥಳ ಶುಚಿತ್ವದಿಂದಿರುವುದಿಲ್ಲ. ಹಣದ ಖರ್ಚು, ಪೆಟ್ರೋಲ್/ಡೀಸೆಲ್ ಖರ್ಚು ಉಳಿಸಬಹುದು. ಹೀಗೆ ಹತ್ತು ಹಲವಾರು ಯೋಚನೆಗಳು ಜನರಲ್ಲಿ ಬಂದಿವೆ. ಒಂದು ರೀತಿ ನೋಡಿದರೆ ಇದು ನಿಜವೆನಿಸುತ್ತದೆ.

ಮತದಾರ ಯಾವ ಭಾವನೆಯಿಂದ ಆಯ್ಕೆ ಮಾಡಿಕೊಂಡ ನಾಯಕನಿಗೆ ಮತ ಚಲಾಯಿಸುತ್ತಾನೋ ಆ ನಾಯಕ ಮತದಾರರ ಸಂಕಷ್ಟಗಳಿಗೆ ಸ್ಪಂದಿಸುವುದಿಲ್ಲ. ಬರೀ ನಾಟಕ. ಇದನ್ನು ಅರಿತೂ ಮತ ಚಲಾಯಿಸುತ್ತಾರೆ. ಈಗಲಾದರೂ ಆಯ್ಕೆಗೊಂಡ ಅಭ್ಯರ್ಥಿಗಳು ಮತ ನೀಡಿರುವವರನ್ನು ಮರೆಯಬೇಡಿ. ಸದಾ ಅವರೊಡನೆ ಒಳ್ಳೆಯ ಬಾಂಧವ್ಯದಿಂದ ಇರಿ. ಈ ಚುನಾವಣೆಯಲ್ಲಿ ಮತದಾರ ಗೆಲ್ಲುತ್ತಾನೋ? ಅಥವಾ ನಾಯಕ ಗೆಲ್ಲುತ್ತಾನೋ? ಇನ್ನು ಒಂದೂವರೆ ತಿಂಗಳು ಫಲಿತಾಂಶಕ್ಕೆ ಕಾಯಬೇಕಾಗಿದೆ. ಆಯ್ಕೆಯಾದವರು ಆಯ್ಕೆ ಮಾಡಿದವರಿಗೆಲ್ಲಾ ಹಾಗೂ ದೇಶಕ್ಕೆ ಒಳ್ಳೆಯದನ್ನೇ ಮಾಡಲಿ ಎಂಬುದು ಜನರ ಆಶಯವಾಗಿದೆ.

ಸಂಪಾದಕ
**ಹೆಚ್.ವಿ. ಸುಬ್ಬರಾವ್**
ನಿವೃತ್ತ ಸಾ.ಶಿ.ಇ. ನೌಕರ


# ಮಹಿಳಾ ವಿಶೇಷ

## ಕನ್ನಡ ತಿಂಗಳ ಪತ್ರಿಕೆ

**ಏಪ್ರಿಲ್ 1 ರಿಂದ 30–2019**

**ಸಂಪುಟ 4, ಸಂಚಿಕೆ 8,**

**ಪುಟ 16 ಬೆಲೆ ರೂ.: 10**

**MAHILA VISHESHA**

**KANNADA MONTHLY**

**April 1 to 30 -2019**

Vol : 4 **Issue : 8 Pages : 16**

**Price : Rs.10/-**

**ಮುಖಪುಟ :**

**ಕಳಲೆ ಆಲದಮ್ಮ ಗ್ರಾಮದೇವತೆ ದೇವಸ್ಥಾನ**

**ಗೌರವ ಸಂಪಾದಕರು :**

**ಶ್ರೀಮತಿ ಸತ್ಯಭಾಮಾ ದಾಸ್**

**ಶ್ರೀಮತಿ ಗೀತಾ ರಾವ್**

**ಸಂಪಾದಕರು :**

**ಹೆಚ್.ವಿ.ವೆಂಕಟಸುಬ್ಬರಾವ್**

**ಮೊಬೈಲ್ 9243584444**

**ಉಪಸಂಪಾದಕರು :**

**ಎಸ್.ವೆಂಟಕರವಣಪ್ಪ**

**ಎಂ.ಆರ್. ಜಯಪ್ರಕಾಶ ನಾರಾಯಣ**

**ಭಾಸ್ಕರ್ ಹೆಚ್.ವಿ.**

**ಎಸ್.ಆರ್. ಅನಿಲ್‌ಕುಮಾರ್**

**ಕಚೇರಿ ವಿಳಾಸ :**

**ಮಹಿಳಾ ವಿಶೇಷ**

**ರೂಂ. ನಂ. 03, ಸಿಟಿ ಬಸ್‌ಸ್ಟ್ಯಾಂಡ್ ಕಟ್ಟಡ,**

**2ನೇ ಮಹಡಿ, ಕೆ.ಆರ್. ಸರ್ಕಲ್,**

**ಮೈಸೂರು – 570001**

**E-mail:**
**mahilavishesha15@gamil.com**
**Web: www.mahilavishesha.in**
**Whatsapp No : 8880334444**

# ಯುಗಾದಿ: ಬತ್ತಿಯು ತಾನು ಉರಿದು ಇತರರಿಗೆ ಬೆಳಕನ್ನು ನೀಡುತ್ತದೆ




ಯುಗಾದಿ ಪದವೇ ಸೂಚಿಸುವಂತೆ ಹೊಸ ಸಂವತ್ಸರದ ಮೊದಲ ದಿನವೇ "ಯುಗಾದಿ". ಈ ಹೊಸ ಸಂವತ್ಸರವನ್ನು ಸಂತೋಷದಿಂದ ಸ್ವಾಗತಿಸಿ ಕೊಂಡಾಡುವ ಸಂಕೇತವಾಗಿ ಈ ಹಬ್ಬವನ್ನು ಆಚರಿಸುತ್ತೇವೆ. ಕನ್ನಡಿ, ಹೂವು, ಹಣ್ಣುಗಳ ಶುಭಸಂಕೇತವಾಗಿರುವುದರಿಂದ ವರ್ಷಾರಂಭದ ದಿನ ಮೊದಲು ಇವುಗಳ ದರ್ಶನ ಮಾಡಿದಲ್ಲಿ ಮನೆಯಲ್ಲಿ ಶುಭಕಾರ್ಯಗಳು ನಡೆಯುತ್ತವೆ ಎಂಬ ಒಂದು ನಂಬಿಕೆಯೇಈ ಒಂದು ಸಂಪ್ರದಾಯಕ್ಕೆ ಕಾರಣವಾಗಿದೆ. ವಸಂತಋತುವಿನ ಮೊದಲ ಮಾಸ, ಚೈತ್ರದ ಪ್ರಥಮದಿನದಂದು ಆಚರಿಸುವ ಈ ಹಬ್ಬವು ನಮ್ಮನ್ನು ಕಾಮನಿಂದ ರಾಮನತ್ತ, ಕಹಿಯಿಂದ ಸಿಹಿಯತ್ತ ಒಯ್ಯುತ್ತದೆ.

ಋತುಗಳ ರಾಜ ವಸಂತನ ಶುಭಾಗಮನವನ್ನು ಸೂಚಿಸುವ ಈ ಮಾಸದ ಮಲ್ಲಿಗೆ, ಮಾವು, ಬೇವುಗಳ ಚಿಗುರಿನ ಕಂಪು ಚಿತೋಹಾರಿ. ಎಲ್ಲೆಲ್ಲೂ ಪ್ರಕೃತಿಮಾತೆಯ ಹಸಿರುಡುಗೆಯ ಪರಿಸರದಲ್ಲಿ ಸಡಗರ ಸಂಭ್ರಮದಿಂದ ಆಚರಿಸುವ ಹಬ್ಬವಿದು. ಸಾಮಾನ್ಯರು, ಆಸ್ತಿಕರು ಭಗವಂತನನ್ನು ಆರಾಧಿಸಿ ಸಿಹಿಯನ್ನುಂಡು ಹಬ್ಬವನ್ನಾಚರಿಸಿದರೆ ಕವಿಗಳು ಕಾವ್ಯ, ಕವನಗಳಲ್ಲಿ ಈ ಪ್ರಕೃತಿಯ ಸೌಂದರ್ಯವನ್ನು ವರ್ಣಿಸಿ, ಈ ಋತುವಿನ ಕಾಲದಲ್ಲಿ ಆಚರಿಸುವ ಈ ಹಬ್ಬದ ವೈಖರಿಯುನ್ನೂ ಜನರ ಸಂತೋಷ ಸಂಭ್ರಮವನ್ನೂ ಮುಗ್ಧಹೃದಯಗಳ ಮುಂದಿಟ್ಟು ಹೆಚ್ಚು ಸ್ಫೂರ್ತಿಯನ್ನು ನೀಡುತ್ತಿದ್ದಾರೆ. ಹಾಗಾಗಿ ಇತರ ಹಬ್ಬಗಳಂತೆ ಹೆಚ್ಚು ಧಾರ್ಮಿಕ ಅಂಶಕ್ಕೇ ಒತ್ತು ಕೊಡದೆ ಯಾವ ಬೇಧಭಾವವಿಲ್ಲದೆ ಎಲ್ಲರೂ ಒಟ್ಟಾಗಿ ಸಡಗರದಿಂದ ಕೂಡಿ ಆಚರಿಸುವ ಹಬ್ಬ ಈ ಯುಗಾದಿ.

ಈ ಹಬ್ಬದಲ್ಲಿ ಧಾರ್ಮಿಕ, ಸಾಂಪ್ರದಾಯಿಕ ಕಟ್ಟುಪಾಡುಗಳಿಗಿಂತ ಪ್ರಕೃತಿದೇವಿಯುನ್ನು ಮುಗ್ಧವಾಗಿ ಆರಾಧಿಸುವುದು ಒಂದು ವೈಶಿಷ್ಟ್ಯ. ಇಂತಹ ಒಂದು ಪ್ರಕೃತಿ ಸೊಬಗಿನ ಆರಾಧನೆಯ ಮೂಲಕ ಚೈತ್ರಮಾಸದಲ್ಲಿ ಪ್ರಾರಂಭವಾಗುವ ಈ ಯುಗಾದಿ ಹಬ್ಬದಾಚರಣೆಯಿಂದ ಅಶ್ವಯುಜ ಮಾಸದವರೆಗೂ ಆಸ್ತಿಕರು ಮಾಡುವ ಹತ್ತುಹಲವಾರು ಹಬ್ಬಗಳು, ವ್ರತಗಳು, ಪೂಜೆಗಳು ಸ್ವರ್ಗ, ವೈಕುಂಠಧಾಮಗಳಿಂದ ಭಗವಂತನನ್ನು ಧರೆಗಿಳಿಯುವಂತೆ ಮಾಡುತ್ತವೆ ಎಂದೆನ್ನಬಹುದು.

ಶಿವಶಕ್ತಿಯ ಮುಖಗಳಿಂದ 6 ರಾಗಗಳು ಉತ್ಪತ್ತಿಯಾಗಿ 6 ಋತುಗಳಿಗೆ ಸಂಬಂಧಿಸಿವೆ ಎಂದು ಪುರಾಣಗಳಿಂದ ತಿಳಿದುಬಂದಿದೆ. ಉದಾ: ವಸಂತ ಋತುವಿಗೆ ವಸಂತರಾಗ, ಗ್ರೀಷ್ಮ ಋತುವಿಗೆ ದೀಪಕರಾಗ ಇತ್ಯಾದಿ. ವಸಂತ ಋತುವಿಗೊಪ್ಪುವಂತೆ ವಸಂತರಾಗವೂ ಶೃಂಗಾರ ರಸಪ್ರಧಾನವಾದ ರಾಗ. ಹೊಸ ಚಿಗುರು ಹಳೇ ಬೇರು ಸೇರಿದರೆ ಮರ ಸೊಬಗು ಎಂಬಂತೆ ಚೈತ್ರಮಾಸ ಅಡಿ ಇಡುತ್ತಿದ್ದಂತೆ ಸೃಷ್ಟಿಯ ವಾತಾವರಣ ತನ್ನಷ್ಟಕ್ಕೆ ತಾನೇ ಬದಲಾಗುತ್ತದೆ. ಹಸಿರುಟ್ಟ ಬನಶಂಕರಿಯ ನೋಟ ಜೀವಕ್ಕೆ ಹೊಸ ಚೈತನ್ಯ, ಚೇತನವನ್ನು ನೀಡುತ್ತದೆ.

ಧಾರ್ಮಿಕವಾಗಿ ಈ ದಿನದಂದು ಪಂಚಾಂಗ ಶ್ರವಣ ಅತಿ ಮುಖ್ಯವಾದ ಒಂದು ಕಾರ್ಯ, ತಿಥಿ, ನಕ್ಷತ್ರ, ವಾರ, ಯೋಗ, ಕರಣವೆಂಬ ಪಂಚಾಂಗದ ಫಲವನ್ನು ಕೇಳಿದವರ ಪಾಪಗಳು ನಾಶವಾಗುತ್ತವೆ. ಅಂತಹ ಆಸ್ತಿಕರು ದೀರ್ಘಾಯುಗಳೂ, ಐಶ್ವರ್ಯವಂತರೂ ಕೀರ್ತಿವಂತರೂ ಆಗುತ್ತಾರೆ. ತಿಥಿಯಿಂದ ಐಶ್ವರ್ಯ, ವಾರದಿಂದ ಆಯುರ್ವೃದ್ಧಿ, ನಕ್ಷತ್ರದಿಂದ ಪಾಪಪರಿಹಾರ, ಯೋಗದಿಂದ

ರೋಗನಿವಾರಣೆ, ಕರಣದಿಂದ ಕಾರ್ಯಸಿದ್ಧಿ ಶುಭಫಲಗಳು ಲಭಿಸುತ್ತವೆ.

"ಶತಾಯುರ್ವಜ್ರ ದೇಹಾಯ ಸರ್ವ ಸಂಪತ್ಕರಾಯಚ
ಸರ್ವಾರಿಷ್ಟ ವಿನಾಶಾಯ ನಿಂಬಕದಳಂ ಭಕ್ಷಣಂ"

ಈ ಶ್ಲೋಕವನ್ನು ದೇವತಾಪೂಜೆಯಾದ ನಂತರ, ಹೇಳುತ್ತಾ ಬೇವುಬೆಲ್ಲವನ್ನು ಸೇವಿಸುವುದು ಸಂಪ್ರದಾಯ. ಯುಗಾದಿ ಹಬ್ಬವನ್ನು ಚಾಂದ್ರಮಾನುಸಾರ ಪ್ರತಿವರ್ಷವೂ ಚೈತ್ರಮಾಸದ ಶುಕ್ಲಪಕ್ಷದ ಪ್ರತಿಪದೆಯಂದು ಕರ್ನಾಟಕ ರಾಜ್ಯದ ವಡಮಾ ಜನಾಂಗವು ಆಚರಿಸಿದರೆ, ತಮಿಳು ನಾಡಿನ ವಡಮಾ ಜನಾಂಗವು ಸೌರಮಾನದ ಅನುಸಾರ ಮೇಷ ಮಾಸದ ಶುಕ್ಲ ಪಕ್ಷದ ಮೊದಲದಿನದಂದು ಆಚರಿಸುತ್ತಾರೆ. ಕೇರಳ ರಾಜ್ಯದ ವಡಮಾ ಪಂಗಡದವರು ಈ ಹಬ್ಬವನ್ನು ವಿಷುಕಳಿಯೆಂದು ಆಚರಿಸುತ್ತಾರೆ.

ಮಾನವನ ಬಾಳಿನಲ್ಲಿ ಬೇಸಿಗೆಯಂತಹ ತಾಪದಾಯಕ ಪ್ರಸಂಗಗಳೂ, ಮಳೆಗಾಲದ ಸಿಡಿಲಿನಂತಹ ಅನಿರೀಕ್ಷಿತ ಆಘಾತಗಳೂ, ಚಳಿಗಾಲದ ಕೊರೆತದಂತಹ ದುರ್ಭರ ಪ್ರಸಂಗಗಳೂ ಬರುವುದು ಸಹಜ ಸುಖ ಬಂದಾಗ ಹಿಗ್ಗದೆ, ನೋವಿನಲ್ಲಿ ಕುಗ್ಗದೆ ಇವೆರಡನ್ನೂ ಸಮಾನವಾಗಿ ಎದುರಿಸುವ ಶಕ್ತಿಯನ್ನು ಕರುಣಿಸಲು ಭಗವಂತನಲ್ಲಿ ಪ್ರಾರ್ಥಿಸುವುದೇ ಈ ಹಬ್ಬದ ಒಂದು ವೈಶಿಷ್ಟ್ಯ. ಹಾಗಾಗಿ ನೋವು ನಲಿವುಗಳೆರಡನ್ನೂ ಸಹಜವಾಗಿ ಸಮವಾಗಿ ಸ್ವೀಕರಿಸಿ ಜೀವನವನ್ನು ಸಕಾರಾತ್ಮಕ ಹಾದಿಯಲ್ಲಿ ನಡೆಸಬೇಕೆನ್ನುವುದೇ ಈ ಹಬ್ಬದ ಸಂದೇಶ. ಬೇವು, ಬೆಲ್ಲವನ್ನು ಸಮವಾಗಿ, ಸಮಚಿತ್ತದಿಂದ ಸ್ವೀಕರಿಸುವುದು ಈ ಹಿನ್ನೆಲೆಯಲ್ಲಿಯೇ ಎಂಬುದನ್ನು ಅರಿತಾಗ ಮಾತ್ರ ಈ ಹಬ್ಬವನ್ನು ಕೊಂಡಾಡಿದ ಸಾರ್ಥಕತೆ. "ಉಂಡದ್ದೇ ಯುಗಾದಿ ಮಿಂದಿದ್ದೇ ದೀಪಾವಳಿ" ಎಂಬ ನಾಣ್ಣುಡಿಯ ಒಳಾರ್ಥವನ್ನು ಗ್ರಹಿಸಿದಾಗ ಯುಗಾದಿಯ ದಿನ ತಿನ್ನುವ ಬೇವುಬೆಲ್ಲ ಮತ್ತು ಇತರ ತಿನಿಸುಗಳಿಂದ ನಮ್ಮ ದೇಹ ಹಾಗೂ ಮನಸ್ಸಿನ ಮೇಲೆ ಆಗುವ ಪರಿಣಾಮಗಳ ಮಹತ್ವದ ಅರಿವಾಗುತ್ತದೆ.

ಹೀಗೆ ಹೊಸ ಹೊಸ ಆಸೆಗಳು, ಕನಸುಗಳನ್ನು ಸೃಷ್ಟಿಸುವ, ಬದುಕಿನಲ್ಲಿ ಹೊಸ



ಆಶಾಕಿರಣವೊಂದನ್ನು ಹುಟ್ಟಿಸುವ ಹಬ್ಬ ಈ ಯುಗಾದಿ. ಯಾವ ಭೇದಭಾವವಿಲ್ಲದೆ, ಎಲ್ಲಾ ವರ್ಗದ ಜನರು ಕೂಡಿ ಹರ್ಷದಿಂದ ಉನ್ಮತ್ತರಾಗಿ, ಈ ಹಬ್ಬವನ್ನು ಆಚರಿಸುವ ರೀತಿ ಎಲ್ಲರಲ್ಲೂ ಅಭಿಮಾನ, ಸಂತೋಷ ಮೂಡಿಸುತ್ತದೆ. ಎಣ್ಣೆಸ್ನಾನ, ಬೇವು ಬೆಲ್ಲದ ಸವಿ, ಹೊಸಬಟ್ಟೆ, ಒಬ್ಬಟ್ಟು, ಮಾವಿನಕಾಯಿ ಚಿತ್ರಾನ್ನದ ಗಮ್ಮತ್ತು ಈ ಹಬ್ಬದಲ್ಲಲ್ಲದೆ ಇನ್ಯಾವ ಹಬ್ಬದಲ್ಲೂ ಕಾಣಸಿಗದು. ಈ ಹಬ್ಬದ ಮೂಲ ಉದ್ದೇಶ ಎಲ್ಲರ ಬಾಳಿನಲ್ಲಿ ಸುಖ, ಸಂತೋಷ, ಆರೋಗ್ಯ, ಆಯಸ್ಸು, ಅಭಿವೃದ್ಧಿ, ಐಶ್ವರ್ಯ ದ್ವಿಗುಣವಾಗಲಿ ಎಂಬುದಾಗಿದೆ. ಕಷ್ಟಕಾರ್ಪಣ್ಯಗಳು ದೂರವಾಗಿ ಬದುಕು ಸುಂದರವಾಗುತ್ತದೆ.

ಈ ಹಬ್ಬದ ಆಚರಣೆಯಿಂದ, ನಾಡಿನೆಲ್ಲೆಡೆ ಶಾಂತಿಯ ಮಂತ್ರ, ಸಹಬಾಳ್ವೆಯ ತತ್ವ ಭೋರ್ಗರೆಯುತ್ತದೆ. ಸಕಾಲದಲ್ಲಿ ಮಳೆಬೆಳೆಯಾಗಿ ರೈತಾಪಿ ಜನರು ಶಾಂತಿಯಿಂದ ಜೀವನ ನಡೆಸಿ, ಸಮೃದ್ಧಿಯನ್ನು ಹೊಂದುತ್ತಾರೆ. ನದಿ, ಕೆರೆ ಕಟ್ಟೆಗಳು ತುಂಬಿ ಹರಿದು, ಭೂತಾಯಿಯ ಒಡಲು ತಣ್ಣಗಿರಲಿ ಎಂದು ಪ್ರಾರ್ಥಿಸುವ ಹಬ್ಬ ಈ ಯುಗಾದಿ. ಒಟ್ಟಿನಲ್ಲಿ ಪ್ರಕೃತಿಯೇ ದೈವವೆಂದು ನಂಬಿ ಪ್ರಕೃತಿದೇವತೆಯನ್ನು ಆರಾಧಿಸುವ ಈ ಹಬ್ಬ ಇಡೀ ಜೀವಸಂಕುಲ ಯಾವ ಭೇದಭಾವವಿಲ್ಲದೆ ಪ್ರಕೃತಿಯ ಹಸುರಿನ ಮಡಿಲಲ್ಲಿ ಹರ್ಷೋಲ್ಲಾಸದಲ್ಲಿ ತೇಲಾಡಿ, ನೆಮ್ಮದಿಯ ಬಾಳ್ವೆ ನಡೆಸುವಂತಾಗಲಿ ಎಂದು ಪ್ರಾರ್ಥಿಸುವ ಹಬ್ಬ.



**ಶ್ರೀಮತಿ ಇಂದಿರಾ ಗೋವಿಂದ್**
ಮೈಸೂರು

**ನೀರು**

ನೀರು ಅಮೂಲ್ಯ ಹಾಗೂ ಅತ್ಯಾವಶ್ಯಕ.
ಮಿತವಾಗಿ ಬಳಸಿ. ನಾಳೆಗೆ ಉಳಿಸಿ

# ವಿದೇಶಿ ಭಾಷೆ ಕಲಿಕೆಯಿಂದ ಉತ್ತಮ ಭವಿಷ್ಯ

ವಿದೇಶಿ ಭಾಷೆ ಕಲಿಯುವುದರಿಂದ ನಮ್ಮ ಜೀವನಶೈಲಿ ಸಮೃದ್ಧವಾಗುತ್ತದೆ ಎಂದಲ್ಲ: ನಮ್ಮ ದೃಷ್ಟಿಕೋನವೇ ಬದಲಾಗುತ್ತದೆ. ಮುಖ್ಯವಾಗಿ ಇದರಿಂದ ವೃತ್ತಿಜೀವನದಲ್ಲಿ ಪರ್ಯಾಯ ಅವಕಾಶಗಳು ಹಾಗೂ ಭರವಸೆದಾಯಕವಾದ ಉದ್ಯೋಗ ಅನುಭವ ಸಿಗುತ್ತದೆ. ಕೌಶಲಗಳು ಹೆಚ್ಚುವುದರಿಂದ ಆದಾಯ ಹೆಚ್ಚುತ್ತದೆ. ಅಂತಾರಾಷ್ಟ್ರೀಯವಾಗಿ ಗುರುತಿಸಿಕೊಳ್ಳಲು ಸಾಧ್ಯವಿದೆ.

ಅಂತಾರಾಷ್ಟ್ರೀಯ ವರದಿಯೊಂದರ ಪ್ರಕಾರ, ಮುಂದಿನ ಎರಡು ದಶಕಗಳ ಅವಧಿಯಲ್ಲಿ ಉದ್ಯೋಗ ಮಾರುಕಟ್ಟೆಯ ನಾನಾ ವಲಯಗಳಲ್ಲಿ 16 ಲಕ್ಷಕ್ಕೂ ಅಧಿಕ ವಿದೇಶಿ ಭಾಷಾತಜ್ಞರ ಅಗತ್ಯವಿದೆ. ಭಾರತದಲ್ಲಿ ನಾನಾ BPO , IT ಹಾಗೂ KPOಗಳಲ್ಲಿ ನೇಮಕ ಮಾಡಿಕೊಳ್ಳಲಾಗುತ್ತದೆ. ಅಲ್ಲದೇ ಐರೋಪ್ಯ ದೇಶಗಳಲ್ಲಿಯೂ ಬೇಡಿಕೆಯಿರಲಿದೆ.

### ಯಾವ ಭಾಷೆಗಳಿಗೆ ಬೇಡಿಕೆ?

ಜಾಗತಿಕ ಉದ್ಯೋಗ ಮಾರುಕಟ್ಟೆ ಮತ್ತು ಕಾರ್ಪೊರೇಟ್ ಸಂಸ್ಕೃತಿಯ ಇತ್ತೀಚಿನ ಟ್ರೆಂಡ್ ಪ್ರಕಾರ ಫ್ರೆಂಚ್, ರಷ್ಯನ್, ಜರ್ಮನ್, ಚೀನೀಸ್, ಪೋರ್ಚುಗೀಸ್, ಜಪಾನೀಸ್, ಕೊರಿಯನ್ ಭಾಷೆಯ ಸ್ಪ್ಯಾನಿಷ್ – ಈ ವಿದೇಶಿ ಭಾಷೆಗಳಿಗೆ ಈ ಮೊದಲಿಗಿಂತಲೂ ಹೆಚ್ಚಿನ ಬೇಡಿಕೆ ಉಂಟಾಗುವ ನಿರೀಕ್ಷೆಯಿದೆ.

### ಅಗತ್ಯ ಅರ್ಹತೆಗಳು

ಪಿಯುಸಿ/10 ಪ್ಲಸ್ 2 ನಂತರ ವಿದೇಶಿ ಭಾಷೆ ವಿಷಯದಲ್ಲಿ (3 ವರ್ಷಗಳ) ಡಿಗ್ರಿ/12 ವರ್ಷಗಳ) ಸ್ನಾತಕೋತ್ತರ ಪದವಿ/ಪಿಎಚ್‌ಡಿ ಇದನ್ನು ಮಾಡಬಹುದು.

### ಆಕರ್ಷಕ ವೇತನ

ಪ್ರತಿ ತಿಂಗಳು ಕನಿಷ್ಠ 30,000 ರೂಪಾಯಿಯಿಂದ 40,000 ರೂಪಾಯಿಯವರೆಗೆ ಆರಂಭಿಕ ವೇತನ ಪಡೆಯಬಹುದು. ವಿದೇಶಿ ದೂತಾವಾಸ, ಬಿಸ್ನೆಸ್ ಕಾನ್ಸುಲೇಟ್ ಮತ್ತಿತರ ಕಡೆಗಳಲ್ಲಿ ಅನುಭವ ಹೆಚ್ಚಿದಂತೆಲ್ಲ ಆಕರ್ಷಕ ವೇತನ, ಸವಲತ್ತುಗಳು ಸಿಗುತ್ತವೆ. ಎವರ್‌ಗ್ರೀನ್ ಎನಿಸಿರುವ ಇಂಟರ್‌ಪ್ರಿಟೇಷನ್ ಹಾಗೂ ಟ್ರಾನ್ಸ್‌ಲೇಷನ್ ಕ್ಷೇತ್ರಗಳಲ್ಲಿ ವೃತ್ತಿಪರರಿಗೆ ಗಣನೀಯ ಪ್ರಮಾಣದ ವೇತನ ಪ್ಯಾಕೇಜನ್ನು ನಿರೀಕ್ಷಿಸಬಹುದು. ಕುಶಲಿಯಾದ ಇಂಟರ್‌ಪ್ರಿಟರ್‌ಗೆ ಒಂದು ಗಂಟೆಗೆ ಒಂದು ಸಾವಿರ ರೂಪಾಯಿಯಿಂದ ದಿನಕ್ಕೆ 25,000 ರೂಪಾಯಿಯವರೆಗೆ ಸಿಗುತ್ತದೆ. ಅನುವಾದಕರು ಈ ಪ್ರತಿಯೊಂದು ಶಬ್ದಕ್ಕೆ ಒಂದು ರೂಪಾಯಿಯಿಂದ 10 ರೂಪಾಯಿಯವರೆಗೂ ಗಳಿಸಬಹುದಾಗಿದೆ. ಈ ಭಾಷೆಯ ಸ್ವರೂಪ, ಬ್ರ್ಯಾಂಡ್ ಹೆಸರುಗಳನ್ನು ಪರಿಗಣಿಸಿ ಇದು ವ್ಯತ್ಯಾಸವಾಗುತ್ತದೆ.

### ಕಲಿಯುವುದೆಲ್ಲಿ?

ಬಹುತೇಕ ಶಿಕ್ಷಣ ಸಂಸ್ಥೆಗಳಲ್ಲಿ, ಸೆಕೆಂಡರಿ, ಸೀನಿಯರ್ ಸೆಕೆಂಡರಿ ಹಂತದಲ್ಲಿ ಆಫರ್ ಮಾಡಲಾಗುತ್ತದೆ. ಆದರೆ ಬಹುತೇಕ ವಿದ್ಯಾರ್ಥಿಗಳು ಹೈಯರ್ ಸೆಕೆಂಡರಿ ನಂತರ ಇದನ್ನು ಅಭ್ಯಾಸ ಮಾಡುತ್ತಾರೆ. ನಾನಾ ಸಂಸ್ಥೆಗಳು ಡಿಪ್ಲೊಮಾ, ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಆಫರ್ ಮಾಡುತ್ತವೆ. ಬೆಂಗಳೂರಿನ ಫಾರಿನ್ ಲಾಂಗೇಜಸ್ ಟ್ರೇನಿಂಗ್ ಇನ್ಸ್‌ಟಿಟ್ಯೂಟ್, ಹೈದರಾಬಾದಿನ ಇಂಗ್ಲಿಷ್ ಹಾಗೂ ವಿದೇಶಿ ಭಾಷೆಗಳ ವಿಶ್ವವಿದ್ಯಾಲಯ, ಅಣ್ಣಾಮಲೈ ವಿಶ್ವವಿದ್ಯಾಲಯ, ಮದ್ರಾಸ್ ವಿಶ್ವವಿದ್ಯಾಲಯ, ವಾರಾಣಸಿಯ ಬಾರಸ್ ಹಿಂದು ವಿಶ್ವವಿದ್ಯಾಲಯ, ಹೊಸದಿಲ್ಲಿಯ ಜವಾಹರ ಲಾಲ್ ನೆಹರು ವಿಶ್ವವಿದ್ಯಾಲಯ (ಜೆಎನ್‌ಯು), ಹೊಸ ದಿಲ್ಲಿಯ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ, ಮುಂಬಯಿಯ ರಾಮ್ ನಾರಾಯಣ್ ರೂಯಾ ಕಾಲೇಜು ಸೇರಿದಂತೆ ಪ್ರಸಿದ್ಧಿಯಾಗಿರುವ ಸುಮಾರು 15 ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದೇಶಿ ಭಾಷಾ ಕೋರ್ಸ್ ಮಾಡಬಹುದಾಗಿದೆ.

### ಎಲ್ಲೆಲ್ಲಿ ಉದ್ಯೋಗಾವಕಾಶ

ಅಕಾಡೆಮಿಕ್ ಡಿಗ್ರಿ, ವಿದೇಶಿ ಭಾಷೆಯಲ್ಲಿ ಕ್ಷಮತೆಯಿರುವವರಿಗೆ ಬೇಡಿಕೆ ಇದ್ದೇ ಇದೆ. ಪ್ರವಾಸೋದ್ಯಮ, ಶಿಕ್ಷಣ, ರಾಜತಾಂತ್ರಿಕ ಸೇವೆಗಳು, ಇಂಟರ್‌ಪ್ರಿಟೇಷನ್, ಅನುವಾದ, ಅಂತಾರಾಷ್ಟ್ರೀಯ ವ್ಯಾಪಾರ ಹಾಗೂ ಬಾಂಧವ್ಯ, ಮನರಂಜನೆ, ಸಾರ್ವಜನಿಕ ಸಂಪರ್ಕ, ಸಮೂಹ ಮಾಧ್ಯಮ ಹಾಗೂ ಪತ್ರಿಕೋದ್ಯಮ, ಪಬ್ಲಿಷಿಂಗ್ ಸಂವಹನ, ಕಮ್ಯೂನಿಕೇಷನ್, ದೂತಾವಾಸಗಳು ಹಾಗೂ ಕಾನ್ಸುಲೇಟ್‌ಗಳು – ಈ ಕ್ಷೇತ್ರಗಳಲ್ಲಿ ಅವಕಾಶಗಳಿವೆ.

ಮಲ್ಟಿ ನ್ಯಾಷನಲ್ ಕಂಪನಿಗಳಲ್ಲಿಯೂ ನಾನಾ ಹುದ್ದೆಗಳಿಗಾಗಿ ವಿದೇಶಿ ಭಾಷಾ ಪರಿಣತರನ್ನು ನೇಮಿಸಿಕೊಳ್ಳಲಾಗುತ್ತದೆ. ಇದಲ್ಲದೇ ಅಂತರ್ಜಾಲ ವ್ಯವಸ್ಥೆಯಲ್ಲಿ ಕ್ರಾಂತಿಯಾದ ಪರಿಣಾಮವಾಗಿ ಇನ್ನು ಆನ್‌ಲೈನ್ ಕಂಟೆಂಟ್ ರೈಟರ್, ಟೆಕ್ನಿಕಲ್ ಟ್ರಾನ್ಸ್‌ಲೇಟರ್, ಇಂಟರ್‌ಪ್ರಿಟರ್ ಸ್ಥಾನಗಳಿಗಾಗಿ ಬೇಡಿಕೆಯಿದೆ. ವಿಶ್ವಸಂಸ್ಥೆ (ಯುಎನ್) ಸೇರಿದಂತೆ ನಾನಾ ಸಂಸ್ಥೆಗಳಿಗೆ ದೊಡ್ಡ ಪ್ರಮಾಣದಲ್ಲಿ ವಿದೇಶಿ ಭಾಷಾ ವೃತ್ತಿಪರರ ಅಗತ್ಯವಿರುತ್ತದೆ. ಆಹಾರ ಕೃಷಿ ಸಂಸ್ಥೆ (ಎಫ್‌ಓ), ವಿದೇಶಾಂಗ ವ್ಯವಹಾರ ಸಚಿವಾಲಯ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಮೊದಲಾದ ಪ್ರಮುಖ ಸಂಸ್ಥೆಗಳನ್ನು ಇಲ್ಲಿ ಹೆಸರಿಸಬಹುದು.

# ನಾಣ್ಯಗಳ ಫ್ಯಾಷನ್

ಫಳಫಳನೆ ಹೊಳೆಯುವ ಚಿನ್ನ, ಬೆಳ್ಳಿ, ತಾಮ್ರ, ಕಂಚಿನ ನಾಣ್ಯಗಳು ಇದೀಗ ಮಾನಿನಿಯರ ಕತ್ತನ್ನು ಅಲಂಕರಿಸುತ್ತಿವೆ. ಫ್ಯಾಷನ್ ಲೋಕವೇ ಹಾಗೆ, ಇಂದಿನ ಫ್ಯಾಷನ್ ನಾಳೆ ಔಟ್ ಆಫ್ ಫ್ಯಾಷನ್ ಆಗುವ ಸಾಧ್ಯತೆಗಳೇ ಹೆಚ್ಚು. ಹೀಗಿರುವಾಗ ದಿನಕ್ಕೊಂದು ಫ್ಯಾಷನ್ ಅಪ್‌ಡೇಟ್ ಆಗುತ್ತಲೇ ಇದೆ. ಇದೀಗ ನಾಣ್ಯಗಳ ಸರದಿ. ನಾಣ್ಯಗಳನ್ನು ಮಾಲೆಗಳಂತೆ ಪೋಣಿಸಿ ಸರ ಮಾಡಿ ಕತ್ತಿಗೆ ಹಾಕಿಕೊಳುವ ಶೈಲಿ ಇಂದು–ನೆನ್ನೆ ಶುರುವಾಗಿದ್ದಲ್ಲ, ಹಿಂದಿನ ಕಾಲದಲ್ಲಿ ಕಾಸಿನ ಸರ ತೊಡುವವರು ಎಂದರೆ ಅತೀ ಶ್ರೀಮಂತರು ಎಂಬ ಭಾವನೆ ಇತ್ತು. ಅದೇ ರೀತಿ ಪುರಾತನ ಯುಗದಲ್ಲಿಯೂ ಕೂಡ ಚಿನ್ನ, ಬೆಳ್ಳಿ, ತಾಮ್ರ, ಕಂಚು ಹೀಗೆ ಬಗೆಬಗೆಯ ನಾಣ್ಯಗಳ ಸರವನ್ನು ಪುರುಷರು, ಮಹಿಳೆಯರು, ಮಕ್ಕಳು ತೊಡುತ್ತಾ ಬಂದಿದ್ದಾರೆ. ಈಗ ಕೇವಲ ಭಾರತದಲ್ಲಷ್ಟೇ ಅಲ್ಲ, ವಿದೇಶದಲ್ಲಿಯೂ ಮಹಿಳೆಯರು ಡಾಲರ್ ಜೈನ್ ಧರಿಸಿರುವುದನ್ನು ನೀವು ನೋಡಿರಬಹುದು. ಇದೇ ಕಾರಣಕ್ಕೆ ಲಕ್ಷ್ಮಿ ಪೆಂಡೆಂಟ್ ಅನ್ನೂ ಡಾಲರ್ ಎಂದು ಕರೆಯಲಾಗುತ್ತಿತ್ತು. ಈ ಶೈಲಿ ಈಗ ಮತ್ತೆ ಫ್ಯಾಷನ್ ಲೋಕವನ್ನು ಪ್ರವೇಶಿಸಿದೆ.





ಇದೀಗ ಕಾಸಿನ ಸರ ಟ್ರೆಂಡಿಯಾಗಿದ್ದು ಈಗ ಬರೀ ಚಿನ್ನ, ಬೆಳ್ಳಿಯ ಡಾಲರ್‌ಗಳ ಬದಲಿಗೆ ಹಿಂದೆ ಬಳಕೆಯಲ್ಲಿದ್ದ ನಾಣ್ಯಗಳಾದ 5 ಪೈಸೆ, 10 ಪೈಸೆ, 25 ಪೈಸೆ, 50 ಪೈಸೆಯ ವಿಭಿನ್ನ ಆಕಾರಗಳ ನಾಣ್ಯಗಳು ಹಾಗೂ ಹಳೆಯ ಕಾಲದ ನಾಣ್ಯಗಳ ಜೊತೆಗೆ ವಿದೇಶದಲ್ಲಿ ಬಳಕೆಯಲ್ಲಿದ್ದ ಹಳೆಯ ಡಾಲರ್‌ಗಳನ್ನು ಬಳಸಿಕೊಂಡು ಮಾಲೆ ತಯಾರಿಸಿ ಧರಿಸಿಕೊಳ್ಳುವುದು ಇಂದಿನ ಹೊಸ ಟ್ರೆಂಡ್. ಇನ್ನು ಅಲ್ಯುಮಿನಿಯಂ, ಹಿತ್ತಾಳೆ, ಲೋಹ ಪ್ಲಾಸ್ಟಿಕ್, ಗಾಜು ಹಾಗೂ ಮರದ ತುಂಡಿನಿಂದಲೂ ಇಂತಹ ಒಡವೆಗಳನ್ನು ತಯಾರಿಸಲಾಗುತ್ತಿದೆ. ಈ ತರಹದ ಆಭರಣಗಳು ಟ್ರೆಡಿಷನಲ್ ಡ್ರೆಸ್‌ಗಳಿಗೂ ಸೈ ಹಾಗೂ ಮಾಡರ್ನ್ ಡ್ರೆಸ್‌ಗಳಿಗೂ ಸೈ ಎಂಬಂತೆ ಎಲ್ಲಾ ಡ್ರೆಸ್‌ಗಳಿಗೂ ಸೂಟ್ ಆಗುವುದರಿಂದ ಇವುಗಳನ್ನು ಲಂಗ, ಸೀರೆ, ಗೌನ್, ಚೂಡಿದಾರ, ಪ್ಯಾಂಟ್ ಯಾವುದರ ಜೊತೆಗೂ ತೊಡಬಹುದಾಗಿದೆ. ಇವುಗಳನ್ನು ಪೂಜೆ, ಸಭೆ, ಸಮಾರಂಭ, ಮದುವೆ, ಆಫೀಸ್, ಕಾಲೇಜು, ಶಾಪಿಂಗ್ ಎಲ್ಲಿ ಬೇಕಾದರೂ ಧರಿಸಿಕೊಂಡು ಹೋಗಬಹುದು.

ಇಷ್ಟೆ ಅಲ್ಲದೇ ಗೆಜ್ಜೆಗಳಿಂದ ಕೂಡಿದ ಹ್ಯಾಂಗಿಂಗ್‌ಗಳನ್ನು ಮಾಡಬಹುದಾಗಿದೆ. ಬಣ್ಣ ಬಣ್ಣದ ದಾರಗಳಿಂದ ನಾಣ್ಯಗಳನ್ನು ಪೋಣಿಸಿ ನೀವು ಧರಿಸುವ ಉಡುಪಿಗೆ ಮ್ಯಾಚ್ ಮಾಡಿಕೊಳ್ಳಬಹುದು. ಈ ನಾಣ್ಯಗಳ ಸುತ್ತ ಬೀಡ್ಸ್, ಕನ್ನಡಿ ಮತ್ತು ಕುಂದನ್‌ಗಳನ್ನು ಅಳವಡಿಸಿ ಹೊಸ ರೂಪ ನೀಡಲಾಗುತ್ತಿದೆ. ಅಲ್ಲದೇ ಇತ್ತೀಚೆಗೆ ಬರೀ ದುಂಡನೆಯ ಆಕಾರದ ನಾಣ್ಯಗಳನ್ನು ಬಳಸುವುದರ ಬದಲಾಗಿ ಹೃದಯಾಕಾರ, ಚೌಕೋನ, ಪಂಚಕೋನ ಅಲ್ಲದೇ ರಾಶಿ ಚಿಹ್ನೆಗಳು, ಮನೆಯ ಚಿತ್ರ, ಪ್ರಾಣಿ– ಪಕ್ಷಿಗಳ ಚಿತ್ರ, ಗಿಡ ಮರಗಳ ಚಿತ್ರಗಳನ್ನೂ ಬಳಸಿ ಆಭರಣಗಳನ್ನು ತಯಾರಿಸುತ್ತಿದ್ದಾರೆ. ಅಲ್ಲದೇ ಇತ್ತೀಚೆಗೆ ನಾಣ್ಯಗಳ ಉಂಗುರ, ಕಿವಿಯೋಲೆ, ಬಳೆಗಳನ್ನೂ ತಯಾರಿಸಿ ಒಂದು ಪೂರ್ಣ ಪ್ರಮಾಣದ ಸೆಟ್ ವಿನ್ಯಾಸ ಮಾಡಿ ಮಾರುಕಟ್ಟೆಗೆ ಬಿಡುಗಡೆ ಮಾಡಿರುವುದರಿಂದ ಇದು ಮಾನಿನಿಯರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿವೆ.

–ಆಶಾ ಎಸ್. ಕುಲಕರ್ಣಿ

## ಎಲ್ಲರ ಗಮನಕ್ಕೆ...

ಮುಂದಿನ ಕೆಲವು ತಿಂಗಳುಗಳಲ್ಲಿ ಪತ್ರಿಕೆಯು ಮುದ್ರಣ ಮಾಧ್ಯಮದ ಬದಲು ಆನ್‌ಲೈನ್‌ನಲ್ಲಿ ಪತ್ರಿಕೆಯನ್ನು ಓದಲು ಅನುವು ಮಾಡಿಕೊಡಲಾಗುವುದು. ಎಂದಿನಂತೆ ಗ್ರಾಹಕರು, ಜಾಹಿರಾತು ದಾರರು, ಏಜೆಂಟರು, ಹಿತೈಷಿಗಳೆಲ್ಲರೂ ಸಹಕಾರವನ್ನು ನೀಡಬೇಕಾಗಿ ವಿನಂತಿಸ ಲಾಗಿದೆ.

–ಸಂ.

# ತೋಟಕ್ಕೆ ಬಂದ ನೆಂಟ ಮನೆಗೆ ಬಂದ ಚಿಂಟು



ಎಂದಿನಂತೆ ತೋಟಕ್ಕೆ ಹೋಗಿ, ತೆರಿ ಅಡಿಕೆಯನ್ನು ಆರಿಸುತ್ತಾ ಇದ್ದೆ. ಗೋಟಾಗಿ ಪುಟ್ಟ ಉದುರಿದ್ದೋ... ಮಂಗಗಳು ಸೀಬಿ ಬೀಳಿಸಿದ್ದೋ... ಹೀಗೆ ಬರಣದಲ್ಲಿ ಬಿದ್ದ ಅಡಿಕೆಗಳನ್ನು ಹೆಕ್ಕಿ ಚೀಲ ತುಂಬಿಕೊಳ್ಳುತ್ತಿದ್ದೆ. ಒಂದು ಅಡಿಕೆ ಮರದ ತಳದಲ್ಲಿ ಬಿದ್ದ ಗೋಟಡಿಕೆಯನ್ನು ಆರಿಸಲು ಬಗ್ಗಿದಾಗ, ಥಟ್ಟನೆ ಹಕ್ಕಿಯೊಂದು ಪುಟಿದೆದ್ದು ಅಲ್ಲಿಯೇ ಕುಕ್ಕರಿಸಿ ಕುಳಿತಿತ್ತು. ಆ ಕ್ಷಣ ನನಗೆ ಆಶ್ಚರ್ಯ! ಅದು ನಿಸರ್ಗದಲ್ಲಿ ಹಾರಾಡಿಕೊಂಡು ಇರುವ ನಿಜವಾದ ಹಕ್ಕಿಯೋ? ಅಥವಾ ಹಕ್ಕಿ ರೂಪದ ಎಲೆಯೋ ಎಂಬ ಅನುಮಾನ ಉಂಟಾಗಿತ್ತು. ತುಸು ದೂರ ಸರಿದು ಮತ್ತೆ ಮತ್ತೆ ನೋಡಿ ಆ ದೃಶ್ಯದ ಸೌಂದರ್ಯವನ್ನು ಕಣ್ತುಂಬಿ ಕೊಂಡೆ. ಅದು ಪ್ರಕೃತಿಯಲ್ಲಿರುವ ಗಿಳಿ ಎಂಬುದು ಖಾತರಿ ಆಗಿತ್ತು.

ಆ ಹಸಿರು ಬಣ್ಣದ, ಕೆಂಪು ಮೂತಿಯ ಪುಟ್ಟ ಗಿಳಿಯನ್ನು ನೋಡಿದಾಗ ಮನಸಿಗೂ ಉಲ್ಲಾಸವಾಗಿ, ಕಣ್ಣಿಗೂ ಖುಷಿ ನೀಡಿತ್ತು. ಮುಂಜಾನೆಯೇ ತೋಟಕ್ಕೆ ಬಂದ ಅಪರೂಪದ ಅತಿಥಿಯ ದರ್ಶನದಿಂದ ಸಂಭ್ರಮ ಇಮ್ಮಡಿಸಿ ಬಂದಿತ್ತು. ಆ ಕ್ಷಣ ಚಡ್ಡಿ ಕಿಸೆಯಲ್ಲಿದ್ದ ಪುಟ್ಟ ಸಂಚಾರಿಯನ್ನು ಅವಸರದಿಂದಲೇ ತೆಗೆದು, ಆ ನೆಂಟನ ದೃಶ್ಯವನ್ನು ಕ್ಲಿಕ್ಕಿಸಿಕೊಂಡೆ. ಆಮೇಲೆ ಕೆಲವು ಗಳಿಗೆ ಸುಮ್ಮನಿದ್ದು ಆ ಗಿಳಿಯ ಚಲನವಲನವನ್ನು ಸೂಕ್ಷ್ಮವಾಗಿ ಗ್ರಹಿಸಿದೆ. ಆ ಪುಟ್ಟ ಗಿಳಿ ತನ್ನ ರೆಕ್ಕೆಯನ್ನು ಬಿಚ್ಚಿ ಹಾರಿ ಹೋಗಲು ಅತೀವ ಪ್ರಯತ್ನ ಮಾಡುತ್ತಲೇ ಇತ್ತು. ಆದರೆ ಮೇಲೇರಲು ಸಾಧ್ಯ ಆಗುತ್ತಿರಲಿಲ್ಲ. ಅದಕ್ಕೆ ಏನಾ ಗಿದೆ ಎಂಬುದು ತಿಳಿಯಲಿಲ್ಲ. ಆ ವೇಳೆಯಲ್ಲಿ ಏನು ಮಾಡಬೇಕು ಎಂಬುದು ಸಹಾ ಹೊಳೆಯಲಿಲ್ಲ.

**ವಿಭಿನ್ನ ಪ್ರತಿಕ್ರಿಯೆ**

ಮಾಧ್ಯಮಿಕ ಶಿಕ್ಷಣ ಓದುವ ಸಮಯದಲ್ಲಿ ಪಾಠದೊಳಗಿದ್ದ ಪದ್ಯ ಆ ಕ್ಷಣ ನೆನಪಾಯ್ತು. 'ಬಾ ಬಾ ಗಿಳಿಯೇ... ಬಣ್ಣದ ಗಿಳಿಯೇ, ಹಣ್ಣನು ಕೊಡುವೆನು ಬಾ ಬಾ...' ಈ ಸಾಲು ಅರಿವಿಗೆ ಬಂದಾಗ ಸಮೀಪದಲ್ಲಿ ಯಾವುದಾದ್ರೂ ಹಣ್ಣು ಸಿಗಬಹುದೇ ಅಂಥ ಸುತ್ತೆಲ್ಲಾ ಕಣ್ಣಾಯಿಸಿದೆ.

ಜೊತೆಗೆ ಆ ಮುದ್ದಾದ, ಸುಂದರವಾದ ಗಿಳಿಯ ಛಾಯಾಚಿತ್ರಕ್ಕೆ ಪುಟ ಅಡಿ ಬರಹ ಹೀಗೆ ಬರೆದೆ. ಈ ಹಕ್ಕಿ ಅನಾಥವಾಗಿದೆ. ಹಾರಾಡಲು ಪ್ರಯತ್ನಿಸಿದರೂ ಸಾಧ್ಯ ಆಗುತ್ತಿಲ್ಲ. ಅದನ್ನು ಉಪಚರಿಸಲು ಸಲಹೆ – ಸೂಚನೆ ಕೊಡಿ ಎಂದು ಬರೆದು ವ್ಯಾಟ್ಸಪ್‌ಗೆ ಹಾಕಿದ್ದೆ. ಸಾಮಾಜಿಕ ಜಾಲಕ್ಕೆ ಹಾಕಿದ ಮರುಗಳಿಗೆಯಲ್ಲಿಯೇ ಉತ್ತಮ ಪ್ರತಿಕ್ರಿಯೆಗಳು ಬರಲು ಆರಂಭಿಸಿದಾಗ ನನಗೆ ಪರಮಾಶ್ಚರ್ಯ ಆಗಿತ್ತು. ಅಬ್ಬಬ್ಬಾ! ಒಂದು ಹಕ್ಕಿಯ ಜೀವ ಉಳಿಸಲು ಜನ ಇಷ್ಟೊಂದು ಕಾತರ – ಉತ್ಸಾಹದಿಂದ, ಬಹಳ ಕಾಳಜಿ – ಮಮತೆಯಿಂದ ಸ್ಪಂದಿಸಿದ್ದಾರಲ್ಲಾ ಅನ್ನಿಸಿತ್ತು. ಅವರಿಗೆ ಮನಸ್ಸಿನಿಂದಲೇ ಕೃತಜ್ಞತೆ ಅರ್ಪಿಸಿದ್ದೆ.

ಕೆಲ ಸ್ನೇಹಿತರು ಬಹಳ ಚೆನ್ನಾಗಿದೆಯಲ್ರಿ, ನಂಗೆ ಗಿಳಿಯೆಂದ್ರೆ ತುಂಬಾ ಇಷ್ಟ. ನಾನು ಸಾಕುತ್ತೇನೆ. ಅದಕ್ಕೆ ಏನೇ ಸಮಸ್ಯೆ ಆಗಿದ್ದರೂ ಸಹಾ ನಾನೇ ತಗೊಂಡು ಹೋಗ್ತಿನಿ, ಫೀಸ್ ನಂಗೆ ಕೊಡಿ ಎಂದು ಒತ್ತಾಯದಿಂದ ಹೇಳುತ್ತಿದ್ದರೆ, ಹಣ್ಣುಹಂಪಲು ಕೊಡು, ಅದನ್ನು ತಿನ್ನಲು ಆರಂಭಿಸಿದ್ರೆ ಸುಧಾರಿಸಿಕೊಂಡು ಒಂದೆರಡು ತಾಸಿನ ಬಳಿಕ ಹಾರಿ ಹೋಗ್ತು. ಆದ್ರೆ ಬೆಕ್ಕು, ನಾಯಿಯಿಂದ ದೂರವಿಡು ಎಂಬ ಎಚ್ಚರಿಕೆ ಸಹಾ ನೀಡಿದ್ದರು. ಇನ್ನು ನಾಮಾಂಕಿತ ವಿಜ್ಞಾನಿಗಳ, ತಜ್ಞರ, ಬುದ್ದಿಜೀವಿಗಳ ಸಲಹೆ ಸೂಚನೆ ಇನ್ನೂ ಭಿನ್ನವಾಗಿದ್ದವು.

ಆ ಹಕ್ಕಿಯನ್ನು ಸಮೀಪದ ಪಶು ಆಸ್ಪತ್ರೆಗೆ ಸೇರಿಸಿ, ಚಿಕಿತ್ಸೆ ಕೊಡಿಸಿರಿ. ಮೆದು ಆಹಾರ ಕೊಟ್ಟು ಅದನ್ನು ರಕ್ಷಿಸಿ. ಅನ್ನವನ್ನು ಹಿಚುಕಿ ಕೊಡಿ. ಇಂಥಲ್ಲಿ ಗಿಳಿ ಪಂಜರ ಉಂಟು, ಅಲ್ಲಿಗೆ ದಾನ ಮಾಡಿ. ಹೀಗೆ ಭಿನ್ನ ಭಿನ್ನವಾದ ಪ್ರತಿಕ್ರಿಯೆ ಸಂದಾಯ ಆಗಿದ್ದವು. ಆಗಲೇ ನಾನು ನೆರೆಮನೆಯ ಚಿಕ್ಕಪ್ಪನ ಮನೆಯ ಅಂಗಳಕ್ಕೆ ಆ ಗಿಳಿಯ ಮರಿಯನ್ನು ತಂದು ಆರೈಕೆ ಮಾಡಲು ಅಣಿಯಾಗಿದ್ದೆ. ಯಮ್ಮನೆಯಾ! ಬೆಕ್ಕು ತಿಂದುಬಿಡುಗು ಮಾರಾಯಾ ಎನ್ನುತ್ತಲೇ ದೊಡ್ಡ ಬಕೆಟ್ ತಂದು, ಅದರೊಳಗೆ ಗಿಳಿಯನ್ನು ಇಟ್ಟು ಭದ್ರಪಡಿಸಿದ್ದೆ. ಆಮೇಲೆ ಚಿಕ್ಕು, ಪೇರಲೆಹಣ್ಣನ್ನು ಕೊಟ್ಟಿದ್ವಿ. ಅಲ್ಲದೇ ಸೂಜಿ ಮೆಣಸು, ಅಕ್ಕಿ, ಹಾಗಲ ಹಣ್ಣು. ಹೀಗೆ ಆ ಸಮಯದಲ್ಲಿ ಸುಲಭವಾಗಿ; ತಕ್ಷಣ ಸಿಕ್ಕಿದ್ದನ್ನು ಅವನು ಗಿಳಿಗೆ ನೀಡಿ ಕಾಳಜಿಯಿಂದ ಉಪಚರಿಸಿ, ಅದರ ಸಂರಕ್ಷಣೆಗೆ ಇಬ್ಬರೂ ಸತತ ಪ್ರಯತ್ನ ಮಾಡಿದೆವು.

ಸ್ವಲ್ಪ ಸಮಯದ ಬಳಿಕ ಆ ಹಸಿರಿನ ಗಿಳಿ (ಅದಕ್ಕೆ ಬಾಳೆ ಗಿಳಿ ಎಂದು ಹೇಳುತ್ತಾರೆಂದು ಸ್ನೇಹಿತರೊಬ್ಬರು ತಿಳಿಸಿದರು). ಹಣ್ಣುಗಳನ್ನು ತಿಂದು ಗಟ್ಟಿಯಾಗಿತ್ತು. ತಾಸಿನ ಬಳಿಕ ಮತ್ತೆ ಹಾರಲು ಪ್ರಯತ್ನವನ್ನು ಸಹ ಮಾಡುತ್ತಲೇ

ಇತ್ತು. ಬಹುಶಃ ಇದಕ್ಕೆ ಆಹಾರ ಸಿಗದೇ ಅಶಕ್ತತೆ ಆಗಿರಬಹುದೇ? ಪಾರ್ಶ್ವವಾಯು ತಗುಲಿರಬಹುದೇ ಎಂಬ ತಮಾಷೆಯ ಮಾತುಗಳು ನಮ್ಮಿಂದ ಹೊರ ಹೊಮ್ಮಿದ್ದೂ ಉಂಟು. ನಮ್ಮ ಬಂಧನದಲ್ಲಿದ್ದ ಬಾಳೆ ಗಿಳಿ ಆಹಾರ ಸವಿದು ಚೇತರಿಸಿಕೊಳ್ಳುತ್ತಿತ್ತು. ಅದಕ್ಕೆ ದೊಡ್ಡ ಅಪಾಯ ಏನೂ ಆಗಲಿಲ್ಲ ಎನ್ನುವುದು ಅರಿವಿಗೆ ಬಂದಾಗ ಸಮಾಧಾನ ಆಗಿತ್ತು. ಅಂತು ಒಂದು ಗಿಳಿಯ ಜೀವ ಉಳಿಸಿದ್ದೇವೆ ಎಂಬ ಧನ್ಯತಾಭಾವ ಮನದೊಳಗೆ ಹೆಪ್ಪುಗಟ್ಟಿತ್ತು. ಗಿಳಿಯಿದ್ದ ಬಕೆಟ್‌ನ್ನು ಹೀಗೆಯೇ ನೆಲದ ಮೇಲಿಟ್ಟರೆ ಸಾಕು, ಆ ಪ್ರಾಣಿಗಳಿಂದ ತೊಂದರೆ ಆಗಬಹುದು ಎನ್ನುವ ಮುನ್ನೆಚ್ಚರಿಕೆಯಿಂದ ಆ ಬಕೆಟ್‌ನ್ನು ತುಸು ಎತ್ತರದಲ್ಲಿಟ್ಟು ಜೋಪಾನ ಮಾಡಿದೆವು.

**ಪುರ್ರನೇ ಹಾರಿತು:** ಸುಮಾರು ನಾಲ್ಕು ತಾಸುಗಳ ಕಾಲ ಬಾಳೆ ಗಿಳಿ ಸುರಕ್ಷಿತವಾಗಿಯೇ ಇತ್ತು. ಆಗಲೇ ಹಣ್ಣುಗಳನ್ನು ಸವಿದಿದ್ದ ಗಿಳಿ ಚೇತರಿಸಿಕೊಂಡಂತೆ ತೋರುತ್ತಿತ್ತು. ನಾನು ಮಧ್ಯಾಹ್ನ ಭೋಜನಕ್ಕೆ ಹೋಗುವ ಮೊದಲು ಬಕೆಟ್‌ನಲ್ಲಿದ್ದ ಗಿಳಿಯ ಯೋಗಕ್ಷೇಮವನ್ನು ಗ್ರಹಿಸಿದ್ದೆ. ಅದು ರೆಕ್ಕೆ ಬಡಿದು, ಮೇಲೇರಲು ತೀವ್ರ ಪ್ರಯತ್ನ ಮಾಡುತ್ತಿತ್ತು. ಮುಂಜಾನೆಗಿಂತಲೂ ಈಗ ತುಸು ಎತ್ತರಕ್ಕೆ ಪುಟಿದೇಳುವುದನ್ನು ಕಂಡಾಗ ಸಂತಸಪಟ್ಟೆ. ಊಟ ಮುಗಿಸಿ ಬಂದು ಗಿಳಿ ಇರುವ ಬಕೆಟ್‌ನ್ನು ದೂರದಿಂದ ದೃಷ್ಟಿ ಹರಿಸಿದಾಗ. ಆಶ್ಚರ್ಯ! ಆ ಬಾಳೆ ಗಿಳಿ ಸುಮಾರು ಎರಡು ಪೂಟ್ ಎತ್ತರಕ್ಕೆ ಜಿಗಿದು, ಬಕೆಟಿನ ಕಂಠದ ಮೇಲೆ ಕುಳಿತಿತ್ತು. ಅದು ಬಕೆಟ್‌ನಲ್ಲಿದ್ದ ಗಿಳಿಯೇ? ಅಥವಾ ಬೇರೊಂದು ಗಿಳಿಯೇ ಎನ್ನುವ ಕುತೂಹಲ ಉಂಟಾದಾಗ, ಆ ಬಕೆಟಿನ ಕಡೆ ನಿಧಾನವಾಗಿ ಹೆಜ್ಜೆ ಹಾಕಿದೆ. ನಾ ಬರುವುದನ್ನು ಗ್ರಹಿಸಿದ ಆ ಗಿಳಿಯೂ (ಮುಂಜಾನೆಯಿಂದಲೂ ಬಕೆಟ್‌ನಲ್ಲಿ, ಬಂಧನದಲ್ಲಿರುವ ಗಿಳಿಯೇ ಅದಾಗಿತ್ತು), ಪುರ್ರನೇ ಹಾರಿ ಹೋಗಿತ್ತು. ನೋಡುನೋಡುತ್ತಲೇ ಬಹುದೂರ ಕ್ರಮಿಸಿದ ಆ ಹಚ್ಚ ಹಸುರಿನ ಬಾಳೆ ಗಿಳಿ ನಿಸರ್ಗವೆಂಬ ತನ್ನ ಅರಮನೆ ಸೇರಿಕೊಂಡಿತು. ತೋಟದಲ್ಲಿ ಅನಾಥವಾಗಿದ್ದ ಈ ಗಿಳಿ ಸ್ವಪ್ರಯತ್ನದಿಂದ ಹಾರಿ ಹೋಗಿದ್ದಕ್ಕೆ ಸಂತಸಪಟ್ಟೆ. ಐದಾರು ತಾಸುಗಳ ಕಾಲ ನನ್ನೊಂದಿಗಿದ್ದು, ನನ್ನ ಉಪಚಾರವನ್ನು ಪ್ರೀತಿಯಿಂದ ಸ್ವೀಕರಿಸಿದ ಬಾಳೆ ಗಿಳಿ ಈಗ ಕಾಡನ್ನು ಸೇರಿರಬಹುದು. ಅದರೊಂದಿಗೆ ಕಳೆದ ಸಮಯ, ಸಂತಸ, ಸಂಭ್ರಮವೆಲ್ಲ ಈಗ ಮನಸ್ಸಿನಲ್ಲಿಯೇ ಉಳಿದುಕೊಂಡಿದೆ.

**– ಗಣಪತಿ ಹಾಸ್ಪುರ**

## ಹಲಗೆ ಹಣ್ಣು

ಬೇಸಿಗೆಂಯೆಂದರೆ ಮಲೆನಾಡಿನಲ್ಲಿ ಕಾಡುಹಣ್ಣುಗಳ ಸುಗ್ಗಿ. ನಾನಾ ತರಹದ ಹಣ್ಣುಗಳ ಖಜಾನೆ, ಮುಳ್ಳುಹಣ್ಣು, ಕೌಳಿಹಣ್ಣು, ಗುಡ್ಡೇಗೇರು, ಕಾಡುಮಾವು, ಕಾಕೇ ಹಣ್ಣು, ಬುಕ್ಕೆ, ನೇರಳೆ, ಹಲಸು, ತುಂಬ್ರಿ, ಸಂಪಿಗೆ ಹಣ್ಣು, ಕೇಪುಳ ಹಣ್ಣು, ನೆಲ್ಲಿ, ರಂಜಲು, ಪುನ್ನೇರಲು – ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಈ ಪ್ರಕೃತಿದತ್ತ ಹಣ್ಣುಗಳಿಗೆ ಅವುಗಳದ್ದೇ ಆದ ವಿಶಿಷ್ಟ ರುಚಿ. ವಿಶೇಷವಾದೊಂದು ಪರಿಮಳ, ಕೆಲವು ಸಿಹಿ, ಕೆಲವು ಹುಳಿ, ಅತ್ತ ಸಿಹಿಯೂ ಅಲ್ಲದ, ಇತ್ತ ಹುಳಿಯೂ ಅಲ್ಲದ ಮಿಶ್ರ ರುಚಿಯ ಹಣ್ಣೊಂದಿದೆ. ಅದು ಹಲಗೆ ಹಣ್ಣು. ಅದ್ಭುತ ರುಚಿ ಹೊಂದಿರುವ ಈ ಹಣ್ಣಿನ ಮೇಲೆ ಬೂದು ಬಣ್ಣದ ಮರಳಿನಂತಹ ಒರಟಾದ ತೆಳುಹೊದಿಕೆ ಇರುತ್ತದೆ. ಹಣ್ಣಿನ ಮೇಲ್ಮೆಯನ್ನು ಮೃದುವಾಗಿ ಉಜ್ಜಿದಾಗ ಕಡುಕೆಂಪುಬಣ್ಣದ ಒಳಮೈ ಕಾಣಿಸುತ್ತದೆ. ಇದನ್ನು ಬಾಯಲ್ಲಿಟ್ಟು ಚೀಪಿದಾಗ ಸಿಹಿ ಹಾಗೂ ಈ ಹುಳಿಯ ಮಿಶ್ರ ರುಚಿ ಅನುಭವಕ್ಕೆ ಬರುತ್ತದೆ. ಪೂರ್ಣ ಮಾಗದ ಹಣ್ಣು ಹುಳಿಯಾಗಿರುತ್ತದೆ.



ಕಾಡು ಹಕ್ಕಿಗಳ ಪರಮ ಪ್ರೀತಿಯ ಹಣ್ಣು ಇದು. ಈ ಹಣ್ಣಿನ ಬೀಜವು ಎರಡೂ ಬದಿಯಲ್ಲಿ ಚೂಪಾಗಿದ್ದು, ಸುಮಾರು ಒಂದು ಇಂಚು ಉದ್ದವಾಗಿದ್ದು ಗದೆಯ ಮೇಲ್ಮೈಯಂತೆ ಏಣುಗಳನ್ನು ಹೊಂದಿದೆ. ಈ ಹಣ್ಣು ರುಚಿ ಎಂದು ಹೆಚ್ಚು ತಿನ್ನುವುದು ಉದರದ ಆರೋಗ್ಯಕ್ಕೆ ಒಳ್ಳೆಯದಲ್ಲ. ಆದರೂ ಕೂಡಾ ಹಲಗೆ ಹಣ್ಣು ತನ್ನ ಔಷಧೀಯ ಗುಣದಿಂದಾಗಿ ಮನೆ ಮದ್ದಿನಲ್ಲಿ ಬಳಕೆಯಾಗುತ್ತದೆ. ಈ ಹಣ್ಣಿನ ಸಸ್ಯ ಬಳ್ಳಿ ರೂಪದಲ್ಲಿದ್ದು, ಮತ್ತೊಂದು ಮರವನ್ನು ಆಶ್ರಯಿಸಿ ಪೊದೆಯಾಗಿ ಬೆಳೆಯುತ್ತದೆ. ಯಾವುದೇ ಆರೈಕೆ ಬೇಡದೇ ಸ್ವಾಭಾವಿಕವಾಗಿ ಬೆಳೆಯುವ ಈ ಕಾಡು ಹಣ್ಣುಗಳು ಹೆಚ್ಚು ರುಚಿಕರವೂ ಪುಷ್ಟಿಕರವೂ ಆಗಿರುವುದು ಕೂಡಾ ಅಷ್ಟೇ ವಿಶೇಷ. ವಿನಾಶದ ಅಂಚಿನಲ್ಲಿರುವ ಬಳ್ಳಿಯನ್ನು ಬೆಳೆಸಿ, ಉಳಿಸುವ ಕೆಲಸವಾಗಬೇಕಿದೆ. ಈ ಬೇಸಿಗೆ ರಜೆಯಲ್ಲಿ ಕಾಡು ಸುತ್ತುವ ಅವಕಾಶ ಸಿಕ್ಕು, ಈ ಹಣ್ಣು ಕಣ್ಣಿಗೆ ಬಿದ್ದರೆ ಸವಿಯಲು ಮಾತ್ರ ಮರೆಯಬೇಡಿ. **– ಹೊಸ್ಮನೆ ಮುತ್ತು**

# ಮಳೆ ನೀರು ಸಂಗ್ರಹ

ಅವರು ಪದವಿ ವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಸಹಾಯಕ ಪ್ರಾಧ್ಯಾಪಕರು. ಆದರೆ ಅವರ ಆಸಕ್ತಿಯ ವಿಷಯ ನೀರಿನ ಉಳಿತಾಯ. ಜಲ ಸಂಪನ್ಮೂಲ ಉಳಿತಾಯದ ದೇಶದ ಬಹು ಭಾಗಗಳಲ್ಲಿ ಅಧ್ಯಯನ ಮಾಡಿದವರು. ಮೈಸೂರು ವಿಶ್ವವಿದ್ಯಾನಿಲಯದಿಂದ ಇದೇ ವಿಷಯವಾಗಿ ಡಾಕ್ಟರೇಟ್ ಪದವಿ ಗಳಿಸಿದವರು. ಅವರ ಮನೆಯಲ್ಲಿಯೇ ಮಳೆನೀರಿನ ಸಂಗ್ರಹವನ್ನು ಅಗಾಧ ಪ್ರಮಾಣದಲ್ಲಿ ಮಾಡುತ್ತಿರುವವರು.

ಅವರ ಹೆಸರು ಪ್ರೊ. ಎ.ಎಸ್. ಜೋಸೆಫ್ ಬೆಳ್ತಂಗಡಿ ತಾಲೂಕಿನ ಮಡಂತ್ಯಾರಿನಲ್ಲಿರುವ ಸೇಕ್ರೆಡ್ ಹಾರ್ಟ್ ಪದವಿ ವಿದ್ಯಾಲಯದಲ್ಲಿ ಪ್ರಾಧ್ಯಾಪಕರು, ಅವರ ತಾರಸಿ ಮನೆಗೆ ನಿರ್ಮಿಸಿದ ಹೊಸ ಛಾವಣಿ ಮಳೆನೀರಿನ ಸಂಗ್ರಹಕ್ಕಾಗಿಯೇ ನಿರ್ಮಾಣವಾಗಿದೆ. ಜೂನ್ ತಿಂಗಳಿನಿಂದ ಆರಂಭಿಸಿ ಮಾರ್ಚ್ ತಿಂಗಳವರೆಗೂ ಇವರ ಮನೆಯಲ್ಲಿ ಕೊಳವೆ ಬಾವಿ, ತೆರೆದ ಬಾವಿಗಳಿಂದ ನೀರನ್ನೂ ಬಳಸುವುದಿಲ್ಲ, ಮಳೆನೀರಿನ ಸಂಗ್ರಹವೇ ಇವರಿಗೆ ಜೀವನದಾಯಿಯಾಗಿದೆ.

ತಾರಸಿಯ ಮೇಲ್ಭಾಗದಲ್ಲಿ 2400 ಅಡಿಗಳಷ್ಟು ವಿಸ್ತಾರವಿರುವ ಜಾಗಕ್ಕೆ ಅತ್ಯುತ್ತಮ ದರ್ಜೆಯ ತಗಡಿನ ಶೀಟು ಹೊದೆಸಿ ಜೋಸೆಫ್ ಒಂದು ಛಾವಣಿ ಮಾಡಿದ್ದಾರೆ. ಇದರ ಮೇಲೆ ಬೀಳುವ ಮಳೆಯ ನೀರೆಲ್ಲವೂ ಒಂದು ಕೊಳವೆಯನ್ನು ಸೇರುತ್ತದೆ. ಕೊಳವೆಯಲ್ಲಿ ಸೇರಿದ ನೀರು ಪರಿಶುದ್ಧಗೊಳ್ಳಲು ಮೈಕ್ರೋ ಫಿಲ್ಟರ್ ವ್ಯವಸ್ಥೆಯಿದೆ. ಹೀಗೆ ಶುದ್ಧಗೊಂಡ ನೀರು ತಲಪುವುದು ಫೈಬರ್ ನಿರ್ಮಿತವಾದ ಬ್ಯಾರೆಲ್‌ಗಳಿಗೆ. ಇದಕ್ಕಾಗಿಯೇ ಕಂಪೆನಿಯಲ್ಲಿ ಹೇಳಿ ಹನ್ನೊಂದು ಬಿಳಿ ವರ್ಣದ ಬ್ಯಾರೆಲ್‌ಗಳನ್ನು ಅವರು ಮಾಡಿಸಿ ತಂದಿದ್ದಾರೆ. ಪ್ರತೀ ಬ್ಯಾರೆಲ್ ಎರಡು ಸಾವಿರ ಲೀಟರ್ ನೀರನ್ನು ಸಂಗ್ರಹಿಸಿಟ್ಟುಕೊಳ್ಳುವ ಸಾಮರ್ಥ್ಯ ಪಡೆದಿದೆ. ನೂರು ವರ್ಷ ಭದ್ರತೆಯಿರುವ ಈ ಬ್ಯಾರೆಲ್‌ಗೆ ಅವರು ಒಂದೊಂದಕ್ಕೆ ಹತ್ತು ಸಾವಿರ ರೂಪಾಯಿ ಬೆಲೆ ಕೊಟ್ಟಿದ್ದಾರೆ. ಜೂನ್ ತಿಂಗಳ ನಾಲ್ಕು ದಿನಗಳ ಧಾರಾಕಾರ ಮಳೆಗೆ ಬ್ಯಾರೆಲ್ ಎಲ್ಲವೂ ಯಾರ ತುಂಬಿಕೊಳ್ಳುತ್ತವೆ.

ಅನಂತರವೂ ಸಂಗ್ರಹವಾಗುವ ನೀರು ಸಮುದ್ರದೆಡೆಗೆ ಹೋಗಲು ಜೋಸೆಫ್ ಬಿಡುವುದಿಲ್ಲ. ಮನೆಯಂಗಳದ ತಳದಲ್ಲಿ ಕೂಡ ತೊಟ್ಟಿಯಿರುವ ಸಂಗತಿ ಮೇಲ್ನೋಟಕ್ಕೆ ನಮಗೆ ಕಾಣಿಸುವುದಿಲ್ಲ. ಈ ತೊಟ್ಟಿಯ ತಳ ಮತ್ತು ಬರಿದ ಗೋಡೆಗಳಿಗೆ ಗ್ರಾನೈಟ್ ಶಿಲೆಯನ್ನು ಮುಚ್ಚಿ ಸೆಲೆಯ ಒಂದು ಸಂದಿಯೂ ಉಳಿಯದಂತೆ ಗಾರೆ ಹಚ್ಚಿದ್ದಾರೆ. ಅಲ್ಲಿ 50 ಸಾವಿರ ಲೀಟರ್ ನೀರು ಶೇಖರಣೆಯಾಗುತ್ತದೆ. ಅನಂತರದ ನೀರು 40 ಅಡಿ ಆಳವಿರುವ ತೆರೆದ ಬಾವಿಗೆ ಭರ್ತಿಯಾಗುತ್ತದೆ. ಬಳಿಕ ನಿರಂತರವಾಗಿ 360 ಅಡಿ ಆಳವಿರುವ ಕೊಳವೆ ಬಾವಿಯೊಳಗೆ ಹೋಗುತ್ತದೆ. ಹೀಗೆ ಮಳೆ ನೀರು ಉಳಿತಾಯದ ಪದ್ಧತಿ ಅಳವಡಿಸಿರುವ ಜೋಸೆಫ್ ಇದಕ್ಕಾಗಿ ಸುಮಾರು ಏಳು ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ.

ಜೋಸೆಫ್ ಮನೆ ಕಟ್ಟಿಸಿದ್ದು ನೀರಿಲ್ಲದ ಒಣ ಪ್ರದೇಶದಲ್ಲಿ, ಫೆಬ್ರವರಿ ಹೊತ್ತಿಗೇ ಆಸುಪಾಸಿನ ಯಾರ ಬಾವಿಯಲ್ಲೂ ನೀರಿನ ಪಸೆ ಇರುತ್ತಿರಲಿಲ್ಲ. ಮನೆ ಕಟ್ಟಲು ಬೇಕಾದ ನೀರಿಗೂ ಜೋಸೆಫ್ ಕಷ್ಟಪಟ್ಟಿದ್ದರು. ಆದರೆ ಅವರ ಮಳೆನೀರಿನ ಸಂಗ್ರಹ ಆರಂಭವಾದ ಮೇಲೆ ಎಂಥ ಬಿರು ಬೇಸಗೆಯಲ್ಲಿ ಕೂಡ ಒಂದು ಕಿಲೋ ಮೀಟರ್ ದೂರದ ತನಕ ಇರುವ ಮನೆಗಳ ಯಾರ ಬಾವಿಯೂ ಬರಿದಾಗುವುದಿಲ್ಲ, ಅಲ್ಲಿ ಅಗಾಧ ನೀರಿನ ಸೆಲೆಯುಕ್ಕುತ್ತಿದೆ. ಅವರ ನೀರು ಸಂಗ್ರಹದ ತೊಟ್ಟಿ, ಬ್ಯಾರೆಲ್ ಎಲ್ಲವೂ ಭದ್ರವಾದ ಮುಚ್ಚಳ ಹೊಂದಿವೆ. ಹಾವಸೆ, ಧೂಳು ಒಳಗೆ ಬರುವುದಿಲ್ಲ, ಜಲ ಪರೀಕ್ಷಕ ಮಂಡಳಿಯವರು ಈ ನೀರನ್ನು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಿ ಇದು ಅತ್ಯಂತ ಪರಿಶುದ್ಧವಾಗಿದೆ ಎಂದು ದೃಢಪಡಿಸಿದ್ದಾರೆ.

ಮೊದಲ ಮಳೆಯ ನೀರನ್ನು ಜೋಸೆಫ್ ಸಂಗ್ರಹಿಸದೆ ಹಾಗೆಯೇ ಹೊರಗೆ ಬಿಡುತ್ತಾರೆ. ಅನಂತರದ ನೀರು ಸಂಗ್ರಹವಾಗುವುದು ಪರಿಶುದ್ಧ ನೀರಿಗೆ ನೆಲೆಯಾಗಿದೆ. ಮಳೆಗಾಲ ಕಳೆಯುವವರೆಗೆ ಫೈಬರ್ ಬ್ಯಾರೆಲ್‌ಗಳಲ್ಲಿರುವ ನೀರು ಅಡುಗೆ, ಸ್ನಾನ, ಬಟ್ಟೆ ತೊಳೆಯಲು ಒದಗುತ್ತದೆ. ಆವರೆಗೆ ನೀರೆತ್ತಲು ವಿದ್ಯುತ್ ಬೇಡ. ಅದೂ ಉಳಿತಾಯವಾಗುತ್ತದೆ. ಬಳಿಕ ನೆಲದಾಳದ ನೀರನ್ನು ಮೇಲಿರುವ ಬ್ಯಾರೆಲ್ ಸೇರಿಸಲು ಪಂಪು ಸೆಟ್ ಬಳಸಬೇಕಾಗುತ್ತದೆ. ಮಾರ್ಚ್ ತಿಂಗಳಲ್ಲಿ ಧಾರಾಳವಾಗಿ ಮಳೆ ಬಂದರೆ ಬಾವಿಯ ನೀರು ಮುಟ್ಟುವ ಪ್ರಮೇಯವೇ ಬರುವುದಿಲ್ಲ. ಮಳೆನೀರು ಬಳಸಿ ಚಿಕ್ಕು, ಬಾಳೆ ಒಣ ಬಸಳೆ, ತೊಂಡೆಯಂತಹ ಹಣ್ಣು ತರಕಾರಿಗಳನ್ನು ಪಾಸಿನ ಯಥೇಚ್ಛವಾಗಿ ಬೆಳೆಯುವ ಜೋಸೆಫ್ ಓರ್ವ ಕೃಷಿಕನೂ ಹೌದೆಂಬುದನ್ನು ತೋರಿಸಿಕೊಟ್ಟಿದ್ದಾರೆ.

ನನ್ನ ನೀರಿನ ಸಂಗ್ರಹ ದೊಡ್ಡ ಪ್ರಮಾಣದ್ದು. ಹೀಗಾಗಿ ಖರ್ಚಾದ ಹಣದ ಮೊತ್ತ ದೊಡ್ಡದು. ಆದರೆ ಯಾರೇ ಆದರೂ ಸಣ್ಣ ಪ್ರಮಾಣದಲ್ಲಿ ಮಳೆನೀರು ಸಂಗ್ರಹಿಸಲು ಇಚ್ಛಿಸಿದರೆ ಅವರಿಗೆ ಉಚಿತವಾಗಿ ಮಾರ್ಗದರ್ಶನ ಮಾಡಬಲ್ಲೆ ಎನ್ನುವ ಜೋಸೆಫ್ ಬರದ ಬೇಗೆಯಿಂದ ತತ್ತರಿಸಿರುವ ಪ್ರದೇಶಗಳಲ್ಲಿ ಕೂಡ ಸುಲಭವಾಗಿ ಮಳೆನೀರು ಸಂಗ್ರಹಿಸಿಡುವ ವಿಧಾನಗಳನ್ನು ಅನುಸರಿಸಿ ಭೂಮಿಯ ನೀರಿನ ಆಶ್ರಯವನ್ನು ಕಡಿಮೆ ಮಾಡಲು ಜನ ಮುಂದಾಗಬೇಕಾಗಿದೆ ಎನ್ನುತ್ತಾರೆ.

**–ಪ. ರಾಮಕೃಷ್ಣ ಶಾಸ್ತ್ರಿ**

# ಗ್ರಾಮ ದೇವತೆಗಳು: ಸ್ತ್ರೀ ಚೈತನ್ಯದ ಪ್ರತೀಕ



‘ಯಾ ದೇವಿ ಸರ್ವ ಭೂತೇಷು ಶಕ್ತಿ ರೂಪೇಣ ಸಂಸ್ಥಿತಾಂ‘ –ಇದು ಶ್ಲೋಕವೊಂದರ ಸೊಲ್ಲು, ಅರ್ಧನಾರೀಶ್ವರ, ಕಾಳಿ, ಲಕ್ಷ್ಮಿ, ಸೀತಾ, ಸರಸ್ವತಿ. ಹೀಗೆ ಮಾತೃಶಕ್ತಿಯನ್ನು, ಮಹಿಮೆಯನ್ನು ಆರಾಧಿಸುವ ದೇಶ ನಮ್ಮದು. ಮಹಿಳೆಯರ ಮೇಲೆ, ಹಸುಳೆಯರಿಂದ ಮೊದಲುಗೊಂಡು ಎಳೆಯ ಮಕ್ಕಳ ಮೇಲೆ ದೌರ್ಜನ್ಯಗಳಾಗುತ್ತಿರುವ ಈ ಹೊತ್ತಿನಲ್ಲಿ ‘ದೇವತೆ‘ ಎನ್ನುವ ಕಾನ್ಸೆಪ್ಟ್ ಬಗ್ಗೆಯೇ ಅತೀವ ನೋವಾಗುವುದು ಸಹಜ. ಹಾಗಿದ್ದರೂ ಹೆಣ್ಣು ಅಂದುಕೊಂಡಷ್ಟು ಅಬಲೆಯೂ ಅಲ್ಲ, ಅಸಹಾಯಕಳೂ ಅಲ್ಲ, ಬದಲಾಗಿ ಶಕ್ತಿ ಸ್ವರೂಪಿಣಿ; ಆಕೆಯ ಚೈತನ್ಯ ಆಕೆಗೆ ಮನದಟ್ಟಾಗಬೇಕು ಎನ್ನುವುದೇ ಬಹುಶಃ ಎಲ್ಲೆಡೆ ಧರ್ಮದ ಆಶಯವಾಗಿರಬಹುದು.

ಚಂಡಿ ಚಾಮುಂಡಿ, ಶ್ರೀಗೌರಿ ಈ ರೀತಿಯ ಶಿವ ದೇವತೆಗಳಂತೆಯೇ ದೇವತೆಯ ನಮ್ಮ ಗಮನ ಸೆಳೆಯುವುದು. ಗ್ರಾಮ ದೇವತೆಗಳು ಹೆಚ್ಚಾಗಿ ಉತ್ತರ ಕರ್ನಾಟಕ, ಬೆಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ ಕಾಣಬರುವ ಈ ಸಾಂಸ್ಕೃತಿಕ ಗಾಮ ದೇವತೆಗಳು ಬಹುತೇಕ ‘ವೈಲ್ಡ್‘ ಆಗಿ ಕಾಣಿಸಿಕೊಳ್ಳುತ್ತವೆ. ಈ ಗ್ರಾಮ ದೇವತೆಗಳು ಮನುಷ್ಯರೇ ಆಗಿದ್ದು, ಯಾವುದಾದರೊಂದು ರೀತಿಯಲ್ಲಿ ಅಸಹಜ ಸಾವು (ಕೆರೆಗೆ ಹಾರ, ಕೊಲ್ಲಲ್ಪಡುವುದು, ಸತಿ ಹೋಗುವುದು ಹೀಗೆ) ಹೊಂದಿದವರಾಗಿರುತ್ತಾರೆ, ಸಾವಿನ ನಂತರ ದೇವತೆಯರಾಗಿ ಆರಾಧಿಸಲ್ಪಡುವ ಅವರು ತಮ್ಮ ಅಸಾಮಾನ್ಯ ಶಕ್ತಿಯಿಂದ ತನ್ನ ಭಕ್ತರನ್ನು ರಕ್ಷಿಸುತ್ತಾರೆ ಎನ್ನುವುದು ನಂಬಿಕೆ. ಗ್ರಾಮ ದೇವತೆಗಳು ನಮ್ಮ ನಿಮ್ಮೆಲ್ಲರಂತೆ ಮನುಷ್ಯರಂತೆಯೇ ವರ್ತಿಸುವುದು, ಸಿಟ್ಟುಗೊಳ್ಳುವುದು ಅವರನ್ನು ಮನುಷ್ಯ ಜೀವನಕ್ಕೆ ಹೆಚ್ಚು ಸನಿಹಗೊಳಿಸುತ್ತದೆ. ಕಾರಂತರ ‘ಸರಸಮ್ಮನ ಸಮಾಧಿ‘ ಕೂಡ ಹೆಚ್ಚು ಕಡಿಮೆ ಇದೇ ರೀತಿಯ ಕತೆಯನ್ನು ಹೊಂದಿದೆ. ಇನ್ನು ಅವರಿಗೆ ಹೇಳಿಕೊಳ್ಳುವ ಹರಕೆಗಳೂ ಜನ ಸಮುದಾಯದ ಪ್ರಾಥಮಿಕ ಅಗತ್ಯಗಳ ಬಗ್ಗೆಯೇ ಆಗಿರುವುದು ವಿಶೇಷ. ಉದಾಹರಣೆಗೆ ಪ್ಲೇಗ್, ಸಿಡುಬಿನಂತಹ ಮಾರಕ ಚರ್ಮ ರೋಗಗಳನ್ನು ನಿವಾರಿಸುವುದು, ಸಾಂಕ್ರಾಮಿಕ ರೋಗಗಳಿಂದ ಸಾಂಸ್ಕೃತಿ ಕಾಪಾಡುವುದು, ಬರಗಾಲದಿಂದ ರಕ್ಷಿಸುವುದು, ಮಕ್ಕಳಾಗಲು ಹರಕೆ. ಹೀಗೆ,

ಇನ್ನು ಗ್ರಾಮ ದೇವತೆಗಳು ಸ್ಥಳೀಯವಾಗಿದ್ದು ಒಂದು ಮುಖ್ಯ ಕೆರೆಯಲ್ಲಿ ದೇವತೆಯ ಅಂಶವನ್ನೊಳಗೊಂಡಿರುತ್ತಾರೆ (ಹೆಚ್ಚಾಗಿ ಪಾರ್ವತಿ), ಪ್ರಕೃತಿಗೆ ನಿಕಟವಾಗಿರುವುದೂ ಅವರ ಇನ್ನೊಂದು ವಿಶೇಷ (ಪುಟ್ಟ ಗುಡಿಗಳಲ್ಲಿ ಮರದ ಗುಂಡು ಕೆಳಗೊಂದು ಕಲ್ಲು ಕುಂಕುಮ, ಹೂವು. ಹೀಗೆಲ್ಲ ಅವರ ಆರಾಧನೆ), ಇನ್ನು ಹೆಚ್ಚಿನ ಗ್ರಾಮ ದೇವತೆಗಳೂ ಅಮ್ಮಂದಿರೇ, ಉದಾಹರಣೆಗೆ ಹುಳಿಯಾರಮ್ಮ, ಕೆಂಚಮ್ಮ, ಹುಲಿಗೆಮ್ಮ, ಮಂಕಾಳಮ್ಮ, ಮಣ್ಣಮ್ಮ, ಮಾರಮ್ಮ, ಅಣ್ಣಮ್ಮ, ಹುಚ್ಚಮ್ಮ ಹೀಗೆ. ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಭಾರತ ಎಲ್ಲೆಡೆ ಗ್ರಾಮ ದೇವತೆಯರಿದ್ದಾರೆ. ಕಾಲ ಬದಲಾದಂತೆ ಆಚರಣೆಗಳೂ ಬದಲಾಗುವುದು ಗ್ರಾಮ ದೇವತೆಗಳ ವೈಶಿಷ್ಟ್ಯ. ಉದಾಹರಣೆಗೆ ಕೆಂಚಮ್ಮ ದೇವತೆಯ ಜಾತ್ರೆಯಲ್ಲಿ ಒಂದು ದಿನವಿಡೀ ಬಾಡೂಟ ಸಂಭ್ರಮವಾದರೆ ಇನ್ನೊಂದು ದಿನ ಸಸ್ಯಾಹಾರಿಗಳ ಆಚರಣೆ, ಒಂದಿಡೀ ಸಮುದಾಯದ, ಊರಿನ ಈ ಸಾಂಸ್ಕೃತಿಕ ಪ್ರಜ್ಞೆಯ ಭಾಗವೇ ಆಗಿರುವ ಗ್ರಾಮ ದೇವತೆಗಳ ಉತ್ಸವಗಳಲ್ಲಿ ಮೈಮೇಲೆ ಬರುವುದು, ಸಿಡಿ, ಹೀಗೆ ಆಚರಣೆಗಳು ಅವಿಭಾಜ್ಯ ಅಂಗವೇ.

ಇನ್ನು ಗ್ರಾಮ ದೇವತೆಗಳ ಗುಡಿಗಳಲ್ಲಿ ಕೆತ್ತನೆ, ಅಲಂಕಾರಗಳು ಕಡಿಮೆ. ಒಂದು ನಾಲ್ಕು ಮರಗಳ ನಡುವಣ ಕಲ್ಲು, ತ್ರಿಶೂಲ ಕೂಡ ಒಂದು ಗುಡಿಯೇ. ಆಧ್ಯಾತ್ಮಿಕ ವಿಚಾರಗಳಿಗಿಂತ ದೈನಂದಿನ ಸಮಸ್ಯೆಗಳ ಪರಿಹಾರಕ್ಕೆಯೇ ಗ್ರಾಮಸ್ಥರು ಅವರನ್ನು ನಂಬಿರುವುದು ವಿಶೇಷ, ಕಳೆದುಹೋದ ವಸ್ತುಗಳನ್ನು, ಹಸು –ಕರು ಇತ್ಯಾದಿಗಳನ್ನು ಹುಡುಕಿಕೊಡುವುದು, ಹೆಣ್ಣುಮಕ್ಕಳ ಮದುವೆ, ಮಕ್ಕಳಾಗಲು ವರ ಕೊಡುವುದು ಹೀಗೆ. ತಮಗೆ ಅನ್ಯಾಯವಾದರೆ, ಅಪಮಾನವಾದರೆ ಗ್ರಾಮ ದೇವತೆಗಳು ಶಪಿಸುತ್ತಾರೆ ಕೂಡ. ಬಹುಶಃ ಶಿಕ್ಷೆಯ ಭಯವೇ ಗ್ರಾಮಗಳನ್ನು ಪಾಪರಹಿತವಾಗಿಟ್ಟಿತ್ತು.

ಈ ದೇವತೆಗಳನ್ನು ಶಾಂತಗೊಳಿಸುವ ವಿಧಾನಗಳೂ ಅಷ್ಟೇ ಸರಳ ತಪ್ಪುಗಾಣಿಕೆ ಹಾಕುವುದು ಕರ್ಪೂರ, ಕಾಯಿ, ಸೀರೆ ಕೊಡುವುದು. ಹೀಗೆ ಈ ಕತೆಗಳಿಗೆ ಚಾರಿತ್ರಿಕ, ಸಾಂಸ್ಕೃತಿಕ ಮೌಲ್ಯಗಳೂ ಇವೆ, ಅದೂ ಅಲ್ಲದೆ ಅವು ಕಳೆದುಹೋದ ಕಾಲಘಟ್ಟದ ಒಂದು ಚಿತ್ರಣವನ್ನೂ ಕೊಡುತ್ತವೆ. ಉದಾಹರಣೆಗೆ ಹುಳಿಯಾರಿನ ಕೆಂಚಮ್ಮನ ಮುಖ, ಕೆರೆಯಲ್ಲಿನ ಕಲ್ಲು ಕೆಂಚಮ್ಮನೆಂಬ ಪಾಪದ ಸೊಸೆಗೆ ದಿನವೂ ಆಕೆಯ ಅತ್ತೆ ಕಾಟ ಕೊಡುತ್ತಿದ್ದರಂತೆ. ಒಂದು ಸಲವಂತೂ ಬಟ್ಟೆ ಒಗೆಯುವ ಮಂಕರಿಯಲ್ಲಿ ಒಂದು ಮರದ

ಗುಂಡು ಕಲ್ಲನ್ನೇ ಇಟ್ಟರಂತೆ. ಆ ಕಲ್ಲು ಈಗಲೂ ಆ ಕೆರೆಯಲ್ಲಿ ಇದೆ ಹಾಗೂ ಕತೆಯೇ ಬೇರೆ ಬೇರೆ ರೂಪದಲ್ಲಿ ಹೇಳಲ್ಪಡುತ್ತದೆ. ಇನ್ನು ಕರಗ, ಆರತಿ, ಜಾತ್ರೆ, ತಾಯತ, ಭಸ್ಮ, ಕುಂಕುಮ. ಹೀಗೆ ಒಂದು ರೀತಿಯ ನಿಯತವಾದ ಆಚರಣೆಗಳು ಈ ಗುಡಿಗಳಲ್ಲಿರುತ್ತವೆ.

ಒಟ್ಟಿನ ಮೇಲೆ ಗ್ರಾಮ ದೇವತೆಗಳೆಂದರೆ ಜನಪದ ದೇವತೆಗಳು. ಕರಾವಳಿಯವಳಾದ ನನಗೆ 'ದೈವಗಳ ಕೋಲ, ನೇಮ ನೋಡಿ ಗೊತ್ತಿದೆ. ಗ್ರಾಮದೇವತೆಗಳ ಕತೆಗಳಿಗೂ ದೈವಗಳ ಮಹಿಮೆಗಳಿಗೂ ಕೆಲವು ಸಾಮ್ಯತೆ, ಬೆರಗು ಹುಟ್ಟಿಸುವ ಅಂಶಗಳಿರುವುದು ವಿಶೇಷ. ಈ ಗ್ರಾಮದೇವತೆಗಳು ಹಳ್ಳಿಯ ದೈನಂದಿನ ಜನಜೀವನದ ಭಾಗವೇ ಆಗಿವೆ. ತಮ್ಮ ತಮ್ಮ ಮನೆಗಳಲ್ಲಿ ಕುಲದೇವತೆಯನ್ನು ಅವರು ಆರಾಧಿಸುವುದಿದ್ದರೂ ಗ್ರಾಮ ದೇವತೆಯನ್ನು ಆ ಊರಿನವರೆಲ್ಲ ಪೂಜಿಸುವರು. ಇನ್ನೊಂದು ವಿಶೇಷವೆಂದರೆ ಈ ಎಲ್ಲ ಗ್ರಾಮ ದೇವತೆಯರೂ ನಿಸರ್ಗಕ್ಕೆ ಸನಿಹವಾದವರು. ಉದಾಹರಣೆಗೆ ಮಂಡ್ಯದ ಗ್ರಾಮವೊಂದರ ಮಂಗಮ್ಮ ದೇವಿಯ ಗುಡಿಯಲ್ಲಿ ದೇವಿ ಬೆಕ್ಕಿನ ರೂಪದಲ್ಲಿದ್ದಾಳೆ ಎನ್ನುವ ಪ್ರತೀತಿ. ಇಡೀ ಗ್ರಾಮದಲ್ಲಿ ಬೆಕ್ಕುಗಳಿಗೆ ಯಾವುದೇ ವಿಧವಾಗಿ ತೊಂದರೆ ಕೊಡುವಂತಿಲ್ಲ. ಇನ್ನು ಗ್ರಾಮ ದೇವತೆಗಳಂತೆಯೇ ನಗರ ದೇವಿಯರು. ಉದಾಹರಣೆಗೆ ಚೆನ್ನೈನ ಮರಿನಾ ಬೀಚ್‌ನಲ್ಲಿ ಕಣ್ಣಗಿಯ ಪ್ರತಿಮೆ ಕಾಣಬಹುದು (ಶಿಲಪ್ಪದಿಕಾರಂನಲ್ಲಿ ಕಾಣಬರುವ ತಮಿಳು ಹೆಮ್ಮೆಯ ಪ್ರತೀಕ ಆಕೆ). ಅದೇ ರೀತಿ ಬೆಂಗಳೂರಿನ ಅಣ್ಣಮ್ಮದೇವಿ.

ಮೂರು ಸ್ತರಗಳಲ್ಲಿ ದೇವತೆಯರನ್ನು ಆರಾಧಿಸುತ್ತೇವೆ ಎಂದು ನನಗನಿಸುತ್ತದೆ. ಆದಿಮಾಯ, ಪರಾಶಕ್ತಿ, ದುರ್ಗೆ ಹೀಗೆ ಒಂದು ವಿಧವಾದರೆ, ಮಹಾಭಾರತದಂತಹ ಕೃತಿಗಳಲ್ಲಿ ಕಾಣಬರುವ, ಹಿಡಿಂಬೆ, ದ್ರೌಪದಿ ಅಲ್ಲದೇ ಇತ್ಯಾದಿ ಪಾತ್ರಗಳು, ಇವಲ್ಲದೆ ಗ್ರಾಮ ದೇವತೆಗಳು. ಒಟ್ಟಿನ ಮೇಲೆ ಇವೆಲ್ಲವೂ ಸ್ತ್ರೀ ಚೈತನ್ಯವನ್ನು, ಆಕೆಗಿರುವ ಅನನ್ಯ, ಅಂತರ್ಗತ ಶಕ್ತಿಯನ್ನು ಪ್ರತಿನಿಧಿಸುತ್ತವೆ.

## ಅಹಂಕಾರವನ್ನು ತ್ಯಜಿಸೋಣ

ಹಿಂದೆ ಕಾಶಿ ನಗರದಲ್ಲಿ ಒಬ್ಬ ವಿದ್ವಾಂಸನಿದ್ದ. ಆತನಿಗೆ ತಾನು ವೇದ, ಪುರಾಣ, ಶಾಸ್ತ್ರಗಳನ್ನು ಅಧ್ಯಯನ ಮಾಡಿದ ಮಹಾವಿದ್ವಾಂಸನೆಂದು ಮಹಾಗರ್ವವಿತ್ತು. ಒಮ್ಮೆ ಆತ ದೋಣಿಯೊಂದ ನೇರಿ ಗಂಗಾನದಿ ದಾಟುತ್ತಿದ್ದ. ಆ ಸಂದರ್ಭದಲ್ಲಿ ಸಮಯ ಕಳೆಯಲೆಂದು ನಾವಿಕನೊಡನೆ ಮಾತನಾಡುತ್ತಾ "ಎಲೈ ಅಂಬಿಗನೇ, ನೀನು ವೇದಗಳನ್ನು ಓದಿದ್ದೀಯಾ?' ಎಂದು ಪ್ರಶ್ನಿಸಿದ. ನಾವಿಕನು 'ಇಲ್ಲ ಸ್ವಾಮಿ, ನಾನು ಓದಿಲ್ಲ. ನಾವು ಬಡವರು, ನಮಗೆ ಪುರುಸೊತ್ತೆಲ್ಲಿ?' ಎಂದು ಉತ್ತರಿಸಿದ. ಆಗ ಪಂಡಿತನು ನಿನ್ನ ಬದುಕಿನಲ್ಲಿ ನಾಲ್ಕನೇ ಒಂದಂಶ ವ್ಯರ್ಥವಾಯಿತು' ಎಂದು ಹೀಯಾಳಿಸಿದನು.

ದೋಣಿ ತುಸು ಮುಂದಕ್ಕೆ ಸಾಗಿದಾಗ ಮತ್ತೆ ಪಂಡಿತನು ಪ್ರಶ್ನಿಸಿದನು: "ಏನಯ್ಯ ನಾವಿಕನೇ, ನೀನು ಶಾಸ್ತ್ರ– ಪುರಾಣಗಳನ್ನಾದರೂ ಓದಿದ್ದೀಯಾ?", ಆಗ ಬಡ ನಾವಿಕನು ಹೇಳಿದ: 'ಸ್ವಾಮಿ, ನಮ್ಮಂಥವರಿಗೆ ಹೊಟ್ಟೆ ತುಂಬಿಸುವುದೇ ಕಷ್ಟ. ಇನ್ನು ಶಾಸ್ತ್ರ – ಪುರಾಣ ಹೇಗೆ ಓದಲು ಸಾಧ್ಯ?' ಆಗ ಅಹಂಕಾರಿ ಪಂಡಿತ ನಿನ್ನ ಬದುಕಿನ ಅರ್ಧಾಂಶವೇ ವ್ಯರ್ಥವಾಯಿತಲ್ಲ' ಎಂದು ವಿಷಾದಿಸಿದ.

ಇನ್ನಷ್ಟು ಮುಂದಕ್ಕೆ ಹೋದಾಗ ಪಂಡಿತನು ಮತ್ತೊಂದು ಪ್ರಶ್ನೆ ಹಾಕಿದ: 'ಎಲೈ ನಾವಿಕನೇ, ನೀನು ಭಗವದ್ಗೀತೆಯನ್ನಾದರೂ ಓದಿದ್ದೀಯಾ? ಆಗ ನಾವಿಕನು ದೈನ್ಯದಿಂದ ನುಡಿದ: 'ಇಲ್ಲ ಸ್ವಾಮಿ, ನಾನು ಭಗವದ್ಗೀತೆಯನ್ನು ನೋಡಿಯೇ ಇಲ್ಲ'. ಆಗ ಅಹಂಕಾರಿ ಪಂಡಿತ ಹೇಳಿದ: 'ನಿನ್ನ ಜೀವನದಲ್ಲಿ ಮುಕ್ಕಾಲಂಶ ವ್ಯರ್ಥವಾಯಿತು'.

ಇಷ್ಟರಲ್ಲಿ ಜೋರಾದ ಬಿರುಗಾಳಿ ಕಾಣಿಸಿಕೊಂಡಿತು. ದೊಡ್ಡ ದೊಡ್ಡ ಅಲೆಗಳು ಬೀಸ ತೊಡಗಿದಾಗ ನಾವಿಕ ಪ್ರಶ್ನಿಸಿದ: ಸ್ವಾಮಿ ಪಂಡಿತರೇ, ನೀವೇನೋ ಘನ ಪಂಡಿತರು, ನಿಮಗೆ ಬಹಳ ವಿದ್ಯೆಗಳು ತಿಳಿದಿವೆ. ಆದರೆ ಇದೀಗ ದೋಣಿ ಮುಳುಗುವುದರಲ್ಲಿದೆ. ನಿಮಗೆ ಈಜು ಬರುವುದೇ? "ಪಂಡಿತನು ಇಲ್ಲವೆಂದು ಹೇಳಿದಾಗ, ನಾವಿಕ ನುಡಿದ: 'ವೇದ – ಶಾಸ್ತ್ರ – ಪುರಾಣ ತಿಳಿಯದ ನನ್ನ ಜೀವನದ ಮುಕ್ಕಾಲಂಶ ವ್ಯರ್ಥವಾಯಿತು. ಆದರೆ ಈಜು ಕಲಿಯದ ನಿಮ್ಮ ಇಡೀ ಜೀವನವೇ ವ್ಯರ್ಥವಾಯಿತು' ಎಂದು ನೀರಿಗೆ ಜಿಗಿದು ಈಜಿ ಪಾರಾದ. ಈಜು ತಿಳಿಯದ ಪಂಡಿತ ಮುಳುಗಿ ಹೋದ.

ಆರ್ಜಿಸಿದ ವಿದ್ಯೆಯ ಬಗ್ಗೆ ಅಹಂಕಾರ ಪಡುವುದು ಸರಿಯಲ್ಲ. ಯಾವುದೇ ಸಂದರ್ಭದಲ್ಲಿ ನಮ್ಮನ್ನು ಸಮಸ್ಯೆಗಳಿಂದ ಪಾರು ಮಾಡುವ ವಿದ್ಯೆಯೇ ಶ್ರೇಷ್ಠವಾದುದು. ಪುಸ್ತಕಗಳ ಮೂಲಕ ದೊರೆಯುವ ವಿದ್ಯೆ ಶ್ರೇಷ್ಠವೇನೋ ನಿಜ. ಆದರೆ ಬದುಕಿಗೆ ಬೇಕಾದ ವ್ಯಾವಹಾರಿಕ ವಿದ್ಯೆಯೂ ಅಷ್ಟೇ ಮುಖ್ಯ. ನಮ್ಮಲ್ಲಿರುವ ಜ್ಞಾನ– ವಿದ್ಯೆಯ ಬಗ್ಗೆ ಅಹಂಕಾರ ಪಡುವುದನ್ನು ಬಿಟ್ಟು ಇತರರಲ್ಲಿರುವ ವಿದ್ಯೆ –ಗುಣಗಳನ್ನೂ ಗೌರವಿಸಲು ಕಲಿಯೋಣ. ಇದರಿಂದ ನಮಗೂ ಶ್ರೇಯಸ್ಸು, ಇತರರಿಗೂ ಕ್ಷೇಮ. – **ಲಕ್ಷ್ಮಿ ತಿಮ್ಮಪ್ಪ**

WISH YOU ALL OF THEM APRIL 2019 HAVE A VERY HAPPY BIRTHDAY. GOD BLESS YOU. ALL YOUR DREAMS TO BE FULLFILLED. HAVE A NICE DAY AND KEEP ALWAYS LAUGHING IN YOUR LIFE

| | | | |
|---|---|---|---|
| 1 Sowjanya | Mysuru | 16 Vyshali | Tiptur |
| 2 Haripriya | Mandya | 17 Kamala | Mysuru |
| 3 Shubhangini | Hassan | 18 Mandira | Somwarpet |
| 4 Vinaya | Bangaluru | 19 Bhagyashree | Karwar |
| 5 Lolakshi | Sakaleshpur | 20 Jayasundari | Madurai |
| 6 Yogalakshmi | Beluru | 21 Devaki | New Delhi |
| 7 Kanaka | Kadur | 22 Prajna | Ballary |
| 8 Banumathi | Mysuru | 23 Annies Kanmani Joy | IAS Officer |
| 9 Nirupama | Hospet | 24 Latha | Ramnagara |
| 10 Triveni | Munirabad | 25 Dr. Kalpana G. | IAS Officer |
| 11 Poovamma | Madikeri | 26 Sheshirekha | Tumkur |
| 12 Bharathi | Kolar | 27 Vishaka | Kadur |
| 13 Vasumathi | Saraguru | 28 Lalitha | Bangaluru |
| 14 Hemalatha | Maddur | 29. Roopini | Anekal |
| 15 Sri Tulasi | Bangaluru | 30. Kumari | Mysuru |

## ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ

**1. ಗುರು, ಬಾದಾಮಿ**
ಪರೀಕ್ಷೆಯಲ್ಲಿ ಪಾಸಾಗಲು ಮಾರ್ಕ್ಸ್ ಬೇಕು, ಪ್ರೀತಿಯಲ್ಲಿ ಪಾಸಾಗಲು?
– ಯಾವುದೇ ಬ್ಲಾಕ್ ಮಾರ್ಕ್ಸ್ ಇರಬಾರದು!

**2. ಕುಮಾರ್, ಬೆಳಗಾಂ**
ವಿಗ್ ಹಾಕೋದಕ್ಕೂ, ಪೆಗ್ ಹಾಕೋದಕ್ಕೂ ವ್ಯತ್ಯಾಸವೇನು?
– ವಿಗ್ ಹಾಕೋದು ಹುಡುಗೀಯರನ್ನು ಏಮಾರಿಸಲು, ಪೆಗ್ ಹಾಕೋದು ಏಮಾರಿಸಿದ ಹುಡುಗಿಯನು ಮರೆಯಲು!

**3. ಸ್ವಾಮಿ, ಶಿವಮೊಗ್ಗ**
ಹುಡುಗಿ ಲವ್ ಮಾಡಲು ಕರೆದಾಗ ಹೋಗಲೇಬೇಕಾ?
– ಹುಡುಗ ಅಂತ ಪ್ರೂವ್ ಮಾಡ್ಕೋಬೇಕು ಅಂದ್ರೆ ಹೋಗೋದೇ ಒಳ್ಳೇದು!

**4. ಗೋಪಾಲ, ತುಮಕೂರು**
ಹುಡುಗೀಗೆ ಬರೆದ ಪ್ರೇಮಪತ್ರ ಅವರಮ್ಮನಿಗೆ ತಲುಪಿದೆ. ಮುಂದಿನ ಗತಿ?
– ಅಮ್ಮನ ಕೈಗೆ ಸಿಗದ ಹಾಗೆ ಹುಡುಗೀಗೆ ಡೆಲಿವರಿ ಹಾಗೋ ಹಾಗೆ ನೋಡ್ಕೊಳ್ಳೋದು!

**5. ಸುಮತಿ, ಬೆಂಗಳೂರು**
ಕೇಳಿಯೂ ಕೇಳಿಸದಂತಿರುವವರಿಗೆ ಏನೆನ್ನಬೇಕು?
– ಪಳಗಿದ ಗಂಡ!

**6. ಮುಕುಂದ, ಹಾಸನ**
ಮತಯಾಚನೆಗೂ, ಪ್ರೇಮಯಾಚನೆಗೂ ವ್ಯತ್ಯಾಸ?
– ಮೊದಲನೆಯದು ಒತ್ತಕ್ಕೆ, ಎರಡನೆಯದು ಬಿತ್ತಕ್ಕೆ.

**7. ಶಿವಣ್ಣ, ಮಂಡ್ಯ**
ಮೆಚ್ಚಿ ಮದುವೆಯಾಗೋದಕ್ಕೂ, ಹಿರಿಯರ ಸಮ್ಮುಖದಲ್ಲಿ ಆಗೋಕು ಏನು ವ್ಯತ್ಯಾಸ?
– ಮೆಚ್ಚಿ ಮದುವೆಯಾದರೆ ಡೌರಿ ಇಲ್ಲ, ಹಿರಿಯರ ಮುಂದೆ ಆದ್ರೆ ವರೀ ಇಲ್ಲ.

**8. ಆನಂದ, ಗೋವಾ**
ಮದುವೆಯಾದ ಹೆಂಡತಿಗೂ, ಲಾಟರಿ ಟಿಕೆಟ್‌ಗೂ ಏನು ವ್ಯತ್ಯಾಸ?
– ಲಾಟರಿ ಅಪರೂಪಕ್ಕೆ ಹೊಡೆಯತ್ತೆ, ಆದರೆ ಹೆಂಡತಿ ಆವಾಗವಾಗ ಹೊಡೀತಾನೇ ಇರ್ತಾಳೆ.

**9. ಹೇಮಂತ್, ರಾಯಚೂರು**
ಜನ ಕತೆಗಳ ಮದುವೇನಾ ಮಾಡುತ್ತಾರಲ್ಲ ಏಕೆ?
– ಯಾವನೋ ಮದುವೆ ಮಾಡ್ಸಿದ್ದು ಎಂದು ಕತ್ತೆಗಳು ಹುಡುಕಲ್ವಲ್ಲ ಅದ್ಕೆ!

**10 ಗೋವಿಂದ, ಹಾಸನ**
ಪರಸ್ತ್ರೀಯರ ಸೌಂದರ್ಯ ನೋಡುವುದು ತಪ್ಪೆ?
– ನೋಡ್ತೋದು ತಪ್ಪೇನಿಲ್ಲ, ಆದ್ರೆ ನಿಮ್ಮ ಹೆಂಡತಿ ಸೌಂದರ್ಯವನ್ನು ಬೇರೆಯವರು ನೋಡೋಕ್ಕೆ ಬಿಡಬೇಕಾಗುತ್ತೆ ಅಷ್ಟೆ.

**11 ರಾಜೆ, ಮೈಸೂರು**
ಕುಡುಕರು ಸತ್ಯ ಹೇಳುವುದಕ್ಕೂ, ಹುಡುಗಿಯರು ಸತ್ಯ ಹೇಳೋದಕ್ಕೂ ವ್ಯತ್ಯಾಸವೇನು?
– ಕುಡುಕರು ಟೈಟ್ ಆದಮೇಲೆ ಸತ್ಯ ಹೇಳ್ತಾರೆ, ಹುಡುಗರು ಲೂಸ್ ಆದ್ಮೇಲೆ ಹುಡುಗಿಯರು ಸತ್ಯೆ ಹೇಳ್ತಾರೆ.

**12 ಮಾಯಾ, ಮಡಿಕೇರಿ**
ಹೌದು ಅಂದ್ರೆ ಅಲ್ಲ, ಅಲ್ಲಾ ಅಂದ್ರೆ ಹೌದು. ಇದರ ಅರ್ಥವೇನು?
– ಏತಿ ಅಂದ್ರೆ ಪ್ರೇತಿ, ಇದೊಂಥರ ಚಂಡಿ–ಚಾಮುಂಡಿ ಕಥೆ ಅಷ್ಟೆ!

# ಕ್ಯಾರೇಟ್‌ನಿಂದ ಸೌಂದರ್ಯ ವರ್ಧನೆ



ಪ್ರತಿದಿನ ಹಣ್ಣುಹಂಪಲಗಳ ಸೇವನೆ ಆರೋಗ್ಯ ದಾಯಕ ಎಂಬುದು ತಿಳಿದೇ ಇದೆ. ಸೌಂದರ್ಯ ಹಾಗೂ ಫ್ಯಾಷನ್ನಿಗೆ ಹೆಚ್ಚಿನ ಮಹತ್ವ ಮನ್ನಣೆ ಕೊಡುವ ಇಂದಿನ ದಿನಗಳಲ್ಲಿ ಹಣ್ಣುಗಳನ್ನು ಸೌಂದರ್ಯವರ್ಧಕ ವಾಗಿ ಬಳಸುವುದು ಹೆಚ್ಚು ಜನಪ್ರಿಯವಾಗಿದೆ. ಅಂತಹ ಹಣ್ಣುಗಳಲ್ಲಿ ಕ್ಯಾರೆಟ್ ಕೂಡ ಒಂದು.

**ಚರ್ಮದ ಹೊಳಪಿಗೆ:** ಕ್ಯಾರೆಟ್‌ನಲ್ಲಿರುವ ವಿಟಮಿನ್ ಸಿ ಮತ್ತು ಉತ್ಕರ್ಷಣ ನಿರೋಧಕ ಗುಣಗಳು ಚರ್ಮ ವನ್ನು ಹೊಳಪಿನಿಂದ ಕೂಡಿರುವಂತೆ ಮಾಡುತ್ತದೆ. ಅಲ್ಲದೆ ತ್ವಚೆಯನ್ನು ಮೃದು ಹಾಗೂ ಕೋಮಲ ವಾಗಿರಿಸುತ್ತದೆ.

**ಬಳಸುವ ವಿಧಾನ:** ಸ್ವಲ್ಪ ತುರಿದ ಕ್ಯಾರೆಟ್ ಜತೆಗೆ ಜೇನುತುಪ್ಪ ಬೆರೆಸಿ ಮಿಶ್ರ ಮಾಡಿ ಮುಖಕ್ಕೆ ಹಚ್ಚಿಕೊಂಡು 15 ನಿಮಿಷ ಆರಲು ಬಿಡಿ. ನಂತರ ತಣ್ಣೀರಿನಿಂದ ಮುಖ ತೊಳೆಯಿರಿ. ವಾರಕ್ಕೆ ಎರಡುಬಾರಿ ಮಾಡಿ ಹೊಳೆಯುವ ತ್ವಚೆ ನಿಮ್ಮದಾಗುತ್ತದೆ.

**ಒಣ ಚರ್ಮಕ್ಕಾಗಿ:** ಶುಷ್ಕ ತ್ವಚೆ ನಿಮ್ಮದಾಗಿದ್ದರೆ ಕ್ಯಾರೆಟ್ ಮತ್ತು ಸೌತೆಕಾಯಿ ಸಂಯೋಜನೆಯ ಆರೈಕೆ ವಿಧಾನ ಅತ್ಯುತ್ತಮ ಪರಿಣಾಮ ಬೀರುವುದು. ವಯಸ್ಸಾದ ಕಳೆಯನ್ನು ಸುಲಭವಾಗಿ ನಿವಾರಿಸುವುದು.

**ಬಳಸುವ ವಿಧಾನ:** 2–3 ಟೇಬಲ್ ಚಮಚ ಕ್ಯಾರೆಟ್ ಜ್ಯೂಸ್, 1 ಟೇಬಲ್ ಚಮಚ ಸೌತೆಕಾಯಿ ಪೇಸ್ಟ್, 1 ಟೇಬಲ್ ಚಮಚ ಹಾಲಿನ ಕ್ರೀಂ ಎಲ್ಲವನ್ನೂ ಒಟ್ಟಿಗೆ ಸೇರಿಸಿ ಮಿಶ್ರಣ ಮಾಡಿ ಮುಖಕ್ಕೆ ಹಚ್ಚಿ 15 ನಿಮಿಷ ಬಿಟ್ಟು ಆರಿದ ನಂತರ ತಣ್ಣೀರಿನಿಂದ ಮುಖ ತೊಳೆಯಿರಿ. ಹೀಗೆ ಮಾಡುವುದರಿಂದ ಚರ್ಮವು ತೇವದಿಂದ ಕೂಡಿ ರುವುದು. ಶುಷ್ಕ ಸಮಸ್ಯೆ ಶಾಶ್ವತ ದೂರ ಆಗುವುದು.

**ಎಣ್ಣೆಯುಕ್ತ ಚರ್ಮಕ್ಕೆ:** ಎಣ್ಣೆಯುಕ್ತ ಚರ್ಮವನ್ನು ಆಗಾಗ ಶುಚಿಗೊಳಿಸಿ 3 ಟೇಬಲ್ ಸ್ಪೂನ್ ಕ್ಯಾರೆಟ್ ಜ್ಯೂಸ್, 1 ಚಮಚ ಮಜ್ಜಿಗೆ, 2 ಚಮಚ ಕಡ್ಲೆಹಿಟ್ಟು, 1 ಚಮಚ ನಿಂಬೆರಸ ಎಲ್ಲವನ್ನೂ ಸೇರಿಸಿ ಮುಖಕ್ಕೆ ಹಚ್ಚಿ 30 ನಿಮಿಷ ಬಿಟ್ಟು ಆರಿದ ನಂತರ ತಣ್ಣೀರಿನಿಂದ ಮುಖ ತೊಳೆಯಿರಿ. ಎಣ್ಣೆಯುಕ್ತ ತ್ವಚೆ ಮಾಯವಾಗಿ ಚರ್ಮ ಯೌವನದಿಂದ ಕೂಡಿರುತ್ತದೆ.

**ಟ್ಯಾನ್ ನಿವಾರಣೆಗೆ:** ಸೂರ್ಯನ ಕಿರಣದಿಂದ ತ್ವಚೆಯು ಬಹುಬೇಗ ಕಂದುಬಣ್ಣ ಹೊಂದುತ್ತದೆ. ಜತೆಗೆ ಕಾಂತಿ ಕಳೆದುಕೊಂಡು ಮಂಕಾಗುತ್ತದೆ. ಈ ಸಮಸ್ಯೆ ನಿವಾರಣೆಗೆ ಸುಲಭ ಉಪಾಯ ಕ್ಯಾರೆಟ್ ಫೇಸ್ ಪ್ಯಾಕ್.

1 ಚಮಚ ಕ್ಯಾರೆಟ್ ಜೂಸ್, 1 ಚಮಚ ಮೊಟ್ಟೆಯ ಬಿಳಿಭಾಗ, 1 ಚಮಚ ಮೊಸರು ಸೇರಿಸಿ ಮಿಶ್ರಣ ಮುಖ ಹಾಗೂ ಕತ್ತಿನ ಭಾಗಕ್ಕೆ ಹಚ್ಚಿಕೊಂಡು 20 ನಿಮಿಷದ ಬಳಿಕ ತಣ್ಣೀರಿನಿಂದ ತೊಳೆಯಿರಿ. ವಾರಕ್ಕೆ ಎರಡುಬಾರಿ ಮಾಡುವುದರಿಂದ ಕಾಂತಿಯುಕ್ತ ತ್ವಚೆ ನಿಮ್ಮದಾಗುತ್ತದೆ.

**ಕಲೆಗಳ ನಿವಾರಣೆ:** ಮುಖದ ಕಲೆಯನ್ನು ತೆಗೆಯುವ ಕಲೆಯ ಸಮಸ್ಯೆ ನಿವಾರಣೆಗೆ ಕ್ಯಾರೆಟ್ ಫೇಸ್‌ಪ್ಯಾಕ್ ಅತ್ಯುತ್ತಮ ವಿಧಾನ. ಸಿಪ್ಪೆ ತೆಗೆದು ಬೇಯಿಸಿದ ಎರಡು ಕ್ಯಾರೆಟ್ ಬಳಸಿ ಪೇಸ್ಟ್ ಮಾಡಿಕೊಳ್ಳಿ. ಈ ಪೇಸ್ಟ್‌ಗೆ ನಿಂಬೆರಸ, ಜೇನುತುಪ್ಪ, ಆಲಿವ್ ಎಣ್ಣೆ (ನಿಮ್ಮ ಚರ್ಮ ಎಣ್ಣೆಯುಕ್ತ ಆಗಿದ್ದರೆ ಆಲಿವ್ ಎಣ್ಣೆ ಬೇಡ) ಸೇರಿಸಿ ಮಿಶ್ರಣ ಮಾಡಿ ಮುಖ, ಕತ್ತು, ಭಾಗಕ್ಕೆ ಹಚ್ಚಿ 30 ನಿಮಿಷ ಬಿಟ್ಟು ಬೆಚ್ಚಗಿನ ನೀರಿನಲ್ಲಿ ತೊಳೆಯಿರಿ. ಉತ್ತಮ ಫಲಿತಾಂಶ ಪಡೆಯಿರಿ.

## ಮನೆಮದ್ದು

ಪಪ್ಪಾಯಿ ಪೇಸ್ಟಿಗೆ ಅರಿಶಿಣವನ್ನು ಮಿಶ್ರಣ ಮಾಡಿ ಮುಖಕ್ಕೆ ದಿನಾ ಹಚ್ಚಿ ಅರ್ಧ ಗಂಟೆಯ ನಂತರ ಮುಖವನ್ನು ತೊಳೆದುಕೊಳ್ಳುವುದರಿಂದ ಮುಖದಲ್ಲಿನ ಕೂದಲು ಕ್ರಮೇಣ ನಿವಾರಣೆಯಾಗುತ್ತದೆ.

ಎಲ್ಲ ವಿಧದ ರಕ್ತಸ್ರಾವಗಳಲ್ಲಿ ನಾಗಕೇಶದ ಬಳಕೆ ಪರಿಣಾಮಕಾರಿ.

ಬೂದು ಕುಂಬಳಕಾಯಿ ಸೇವನೆ ಪುರುಷರಲ್ಲಿ ವೀರ್ಯಾಣು ವೃದ್ಧಿಸುವಲ್ಲಿ ಉಪಯುಕ್ತ,

ಮೈಕೈ ನೋವಿನಿಂದ ಬಳಲುವವರು ಮೆಂತ್ಯೆ ಯನ್ನು ಹೆಚ್ಚು ಬಳಸುವುದರಿಂದ ಹಿತ ಕಾಣಬಹುದು.

ಅರ್ಧ ಚಮಚ ಹೊಂಗೆ ಬೀಜದ ಚೂರ್ಣವನ್ನು ಜೇನು ತುಪ್ಪದೊಂದಿಗೆ ಸೇವಿಸಿದರೆ ಒಣಕೆಮ್ಮು ಗುಣಮುಖ ವಾಗುವುದು.

ಗಂಧದ ಪುಡಿಯನ್ನು ಬಾದಾಮಿ ಎಣ್ಣೆಯಲ್ಲಿ ಕಲಸಿ ಫೇಸ್‌ಪ್ಯಾಕ್ ಮಾಡಿಕೊಂಡು ಮುಖಕ್ಕೆ ಹಚ್ಚಿಕೊಳ್ಳ ಬೇಕು. 15 ರಿಂದ 20 ನಿಮಿಷಗಳ ನಂತರ ಮುಖವನ್ನು ತಣ್ಣೀರಿನಲ್ಲಿ ತೊಳೆದುಕೊಳ್ಳುವುದರಿಂದ ನಿಮ್ಮ ಚರ್ಮವು ಕೋಮಲ ಹಾಗೂ ಕಾಂತಿಯುಕ್ತವಾಗುತ್ತದೆ. ಮುಖವನ್ನು ತೊಳೆದುಕೊಂಡ ನಂತರ ಹಸಿ ಹಾಲಿ ನಲ್ಲಿ ನಿಮ್ಮ ಮುಖಕ್ಕೆ ಹತ್ತಿಯಿಂದ ಮಸಾಜ್ ಮಾಡಿ. ಈ ರೀತಿ 2 ಅಥವಾ 3 ವಾರ ಮಾಡುತ್ತ ಬಂದರೆ ನಿಮ್ಮ ಮುಖದ ಹೊಳಪು ಹೆಚ್ಚುತ್ತದೆ. **–ಬಿ. ವಾಸಂತಿ ಎಸ್. ರಾವ್**

# ತಲೆಗೂದಲ ಮ್ಯೂಸಿಯಂ!



ಅಲ್ಲಿಗೆ ನೀವು ಹೋದರೆ ಗಾಢಕಪ್ಪು, ತಿಳಿಕಪ್ಪು, ಕಂದು, ಬಿಳಿ, ಗುಂಗುರು ಹೀಗೆ ತರಹೇವಾರಿ ಜೊಂಪೆಜೊಂಪೆಯಾದ ಕೂದಲುಗಳನ್ನು ನೋಡಬಹುದು. ಅರೆರೆ!! ಇದೇನು ಇಷ್ಟೊಂದು ವೆರೈಟಿ ಕೂದಲುಗಳನ್ನು ಯಾರಾದರೂ ಪ್ರದರ್ಶನಕ್ಕೆ ಇಟ್ಟಿರುತ್ತಾರೆಯೇ? ಎಂದು ಒಂದು ಕ್ಷಣ ನೀವು ಅಚ್ಚರಿಗೊಳ್ಳಬಹುದು. ಹೌದು, ನಾನಾ ವಿಧವಾದ ಕೂದಲುಗಳನ್ನು ತೂಗುಹಾಕಿರುವ ಸ್ಥಳವೊಂದು ಟರ್ಕಿ ದೇಶದಲ್ಲಿದೆ. ಈ ಜಾಗವನ್ನು ನೋಡಬೇಕೆಂದರೆ ಕೆಪ್ಪಾಡೊಸಿಯಾದ ಹತ್ತಿರವಿರುವ ಅವನಾಸ್ ಹಳ್ಳಿಗೆ ಭೇಟಿ ನೀಡಬೇಕು, ಇಡೀ ವಿಶ್ವದಲ್ಲಿ ಇರುವ ವಿಚಿತ್ರ ಮ್ಯೂಸಿಯಂಗಳಲ್ಲಿ ಅವನಾಸ್‌ನಲ್ಲಿರುವ ಕೂದಲ ಮ್ಯೂಸಿಯಂ ಸಹ ಒಂದು.

ಅವನಾಸ್ ಹಳ್ಳಿಯು ರೆಡ್ ರಿವರ್ ನದಿ ದಡದ ಖನಿಜಯುಕ್ತ ಮಣ್ಣಿನಿಂದ ತಯಾರಿಸುವ ಕುಂಬಾರಿಕೆ ಸಾಮಾನುಗಳ ಹಾಗೂ ಉತ್ಕೃಷ್ಟವಾದ ಪಿಂಗಾಣಿ ವಸ್ತುಗಳ ತಯಾರಿಕೆಗೆ ಖ್ಯಾತಿಯನ್ನು ಪಡೆದಿದೆ. ಆದರೆ ಇತ್ತೀಚೆಗೆ ಇದು ಪ್ರಸಿದ್ಧಿಗೊಳ್ಳುತ್ತಿರುವುದು ಅಲ್ಲಿರುವ ವಿಶಿಷ್ಟವಾದ ಕೂದಲ ಮ್ಯೂಸಿಯಂನಿಂದ. ಕುಂಬಾರಿಕೆಯಲ್ಲಿ ಪ್ರವೀಣನಾದ ಚೆಜ್ ಗ್ಯಾಲಿಪ್ ಅದರ ಸೃಷ್ಟಿಕರ್ತ. ಆತನ ಅಂಗಡಿಯ ನೆಲಮಾಳಿಗೆಯಲ್ಲಿ ಮಣ್ಣಿನ ಸಾಮಾನುಗಳ ಜೊತೆಗೆ 16,000 ಕ್ಕೂ ಹೆಚ್ಚು ಮಹಿಳೆಯರ ತಲೆಗೂದಲುಗಳ ಸ್ಯಾಂಪಲ್‌ಗಳಿವೆ. ನೆಲವನ್ನು ಮಾತ್ರ ಬಿಟ್ಟು ಗೋಡೆ, ಮೇಲ್ಛಾವಣಿ ಹೀಗೆ ಎಲ್ಲಿ ನೋಡಿದರಲ್ಲಿ ಜೋತುಬಿದ್ದ ಕೂದಲುಗಳು ಕಾಣುತ್ತವೆ! ಸ್ವಂತ ವಿಳಾಸದ ಪುಟ್ಟ ಚೀಟಿಯೊಂದಿಗಿರುವ ಕೂದಲ ಸ್ಯಾಂಪಲ್‌ಗಳು ಆತನ ಅಂಗಡಿಗೆ ಭೇಟಿಯಿತ್ತಿರುವ ಮಹಿಳೆಯರ ಕೂದಲುಗಳು.

ಈ ಕೂದಲ ಮ್ಯೂಸಿಯಂ ಹುಟ್ಟಿಕೊಂಡಿರುವ ಹಿನ್ನೆಲೆಯಲ್ಲಿ ಬಲು ಸ್ವಾರಸ್ಯವಾದ ಕಥೆಯೊಂದಿದೆ. ಸುಮಾರು 30 ವರ್ಷಗಳ ಹಿಂದೆ ಚೆಜ್ ಗ್ಯಾಲಿಪ್‌ನ ಆತ್ಮೀಯ ಗೆಳತಿಯೊಬ್ಬಳು ಅವನಾಸ್ ಅನ್ನು ಬಿಟ್ಟು ಹೊರಡಬೇಕಾಗಿ ಬಂದಿತು. ಆ ಸಂದರ್ಭದಲ್ಲಿ ಆಕೆಗೆ ಅತೀವ ಬೇಸರ ಆವರಿಸಿಕೊಂಡಿತಂತೆ. ನೆನಪಿಗಾಗಿ ಏನಾದರೂ ಕಾಣಿಕೆ ನೀಡಬೇಕೆಂದು ಯೋಚಿಸಿ ಆಕೆ ತನ್ನ ತಲೆಗೂದಲನ್ನು ಕತ್ತರಿಸಿ ಅದನ್ನು ಗ್ಯಾಲಿಪ್‌ನಿಗೆ ಕಾಣಿಕೆಯಾಗಿ ನೀಡಿದಳಂತೆ. ಅಂದಿನಿಂದ ಇಲ್ಲಿಗೆ ಭೇಟಿ ನೀಡಿದ ಮಹಿಳೆಯರು ಈ ಕಥೆಯನ್ನು ಕೇಳಿ ತಾವೂ ಸಹ ತಮ್ಮ ತಲೆಗೂದಲನ್ನು ಕತ್ತರಿಸಿ ಜೊತೆಗೆ ತಮ್ಮ ಪೂರ್ಣ ವಿಳಾಸವನ್ನು ಬರೆದುಕೊಡಲು ಪ್ರಾರಂಭಿಸಿದರಂತೆ. ಹಾಗೆಯೇ ಕ್ರಮೇಣ ಈ ಕೂದಲ ಸ್ಯಾಂಪಲ್‌ಗಳು ಹೆಚ್ಚಾಗುತ್ತಾ ಈಗ 16,000ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರಪಂಚದ ಬೇರೆಬೇರೆ ದೇಶಗಳ ಮಹಿಳೆಯರ ಬಣ್ಣಬಣ್ಣಗಳ ತಲೆಕೂದಲುಗಳು ಇಲ್ಲಿ ಸಂಗ್ರಹವಾಗಿವೆ.

ವರ್ಷಕ್ಕೆರಡು ಬಾರಿ ಜೂನ್ ಹಾಗೂ ಡಿಸೆಂಬರ್ ತಿಂಗಳಿನಲ್ಲಿ ಗ್ಯಾಲಿಪ್‌ನು ತನ್ನ ಅಂಗಡಿಗೆ ಭೇಟಿ ನೀಡಿದ್ದ ಮೊದಲ ಗಿರಾಕಿಯನ್ನು ಕರೆಸಿ ಆಕೆಯಿಂದ, 10 ಜನರ ಕೂದಲ ಸ್ಯಾಂಪಲ್‌ಗಳನ್ನು ಆರಿಸುತ್ತಾನಂತೆ. ನಂತರ ಆ ಅದೃಷ್ಟಶಾಲಿಗಳಿಗೆ ಕಪ್ಪಾಡೂಸಿಯಾದಲ್ಲಿ ಒಂದು ವಾರದವರೆಗೆ ತಂಗಲು ಬೇಕಾದ ಖರ್ಚನ್ನು ಬಹುಮಾನವಾಗಿ ನೀಡಲಾಗುತ್ತದೆಯಂತೆ ಹಾಗೂ ಅವರಿಗೆಲ್ಲಾ ಈತನ ಕುಂಬಾರಿಕೆಯ ಶಿಬಿರದಲ್ಲಿ ಪಾಲ್ಗೊಳ್ಳುವ ಅವಕಾಶವೂ ಇರುತ್ತದೆಯಂತೆ. ಈ ವ್ಯಾಪಾರಿ ತಂತ್ರಗಾರಿಕೆಯು ದೇಶದ ಮೂಲೆಮೂಲೆಗಳಿಂದ ಗ್ಯಾಲಿಪ್‌ನಿಗೆ ಗಿರಾಕಿಗಳನ್ನು ತರುತ್ತಲಿದೆ.

ಈ ಕೂದಲ ಮ್ಯೂಸಿಯಂಗೆ ಭೇಟಿ ನೀಡಲು ಪ್ರವೇಶ ಶುಲ್ಕವನ್ನು ತರಬೇಕಾಗಿಲ್ಲ. ಯಾವುದೇ ಮಹಿಳೆಯು ತನ್ನ ತಲೆಕೂದಲ ಸ್ಯಾಂಪಲ್ ಅನ್ನು ನೀಡಲು ಇಚ್ಚಿಸಿದಲ್ಲಿ ಅವರಿಗೆ ಕತ್ತರಿ, ಸಲ್ಲೋ ಟೇಪ್, ಪೆನ್, ಪೇಪರ್ ಮತ್ತು ಡ್ರಾಯಿಂಗ್ ಪಿನ್‌ಗಳನ್ನು ನೀಡಲಾಗುತ್ತದೆ! **–ವಿದ್ಯಾ ವಿ. ಹಾಲಭಾವಿ, ಬೆಂಗಳೂರು**

RNI No. KARKAN/2015/71642 KA/SK/MYS/109/2017-2019

# ಯುಗಾದಿ ಹಬ್ಬದ ಶುಭಾಶಯಗಳು


ಯುಗಾದಿ ಹಬ್ಬದ ಶುಭಾಶಯಗಳು

**ಅದಿತಿ ಚಾರಿಟಬಲ್ ಟ್ರಸ್ಟ್**

ಅಗ್ರಹಾರ, ಮೈಸೂರು

**ಶ್ರೀಮತಿ ಸೌಭಾಗ್ಯ**

ಅಧ್ಯಕ್ಷರು

PURE GOLD ONLY

ಬಂಗಾರ ಬೇಕೆನ್ನುವವರು ಸಂಪರ್ಕಿಸಿ

**9243584444**

ಯುಗಾದಿ ಹಬ್ಬದ ಶುಭಾಶಯಗಳು

**ಜನಜಾಗೃತಿ ಗ್ರಾಮೀಣಾಭಿವೃದ್ಧಿ ಸಂಸ್ಥೆ**

ನಜರಬಾದ್, ಮೈಸೂರು

**ಶ್ರೀ ವಿ.ಎನ್. ಮೂರ್ತಿ**

ಕಾರ್ಯನಿರ್ವಾಹಕ ನಿರ್ದೇಶಕರು

ಯುಗಾದಿ ಹಬ್ಬದ ಶುಭಾಶಯಗಳು

**ಸಂಜೀವಿನಿ ಟ್ರಸ್ಟ್**

ಲಕ್ಷ್ಮೀಕಾಂತನಗರ, ಮೈಸೂರು

**ಶ್ರೀಮತಿ ಜ್ಯೋತಿ**

ಕಾರ್ಯದರ್ಶಿ

ಯುಗಾದಿ ಹಬ್ಬದ ಶುಭಾಶಯಗಳು

**ಕ್ರೆಡಿಟ್ ಐ ಸಂಸ್ಥೆ**

ಬಲ್ಲಾಳ್ ಸರ್ಕಲ್, ಮೈಸೂರು

**ಡಾ. ಎಂ.ಪಿ. ವರ್ಷ**

ಸಂಸ್ಥಾಪಕರು

ಯುಗಾದಿ ಹಬ್ಬದ ಶುಭಾಶಯಗಳು

ಎಲ್ಲಾ ಸಾಹಿತಿಗಳ ಪುಸ್ತಕಗಳು ಹಾಗೂ ಸರ್ಕಾರಿ ಸೇವೆಗೆ ಸಂಬಂಧಿಸಿದ ಪುಸ್ತಕಗಳು ದೊರೆಯುತ್ತವೆ.



**ಸಾಹಿತ್ಯ ಸ್ತಂಭ ಬುಕ್ ಹೌಸ್**

ಸಂ.7, 2ನೇ ಮಹಡಿ, ವಿವಿ. ಭವನ,

ಕೆ.ಆರ್. ಸರ್ಕಲ್, ಮೈಸೂರು 570001

**ಮಾಲೀಕರು: ಎನ್. ಜನಾರ್ಧನ್**

ಮೊ: 9341609250

ಯುಗಾದಿ ಹಬ್ಬದ ಶುಭಾಶಯಗಳು

**ಅರ್ಪಿತಾ ಸ್ಮಾರ್ಟ್‌ಲೈಫ್ ಕಂಪನಿ**

ಸರಸ್ವತಿಪುರಂ, ಮೈಸೂರು

**ಶ್ರೀ ವೆಂಕಟರಮಣಪ್ಪ**

ಮ್ಯಾನೇಜಿಂಗ್ ಡೈರೆಕ್ಟರ್


Book Post

To

From
Mahila Vishesha
No. 03, City Bus Stand Building
2nd Floor, K.R. Circle
Mysuru - 570001

Edited, Published and Owned by H.V.Venkatasubbarao, No.1021, 14th Cross, 2nd Stage, Hebbal, Mysore- 570017 and Printed by B.S.Meera and Printed at Annapuoorna Offset Printers, No.511, 14th Main, Saraswathipuram, Mysore-570009
Published at No.1021, 14th Cross, 2nd Stage, Hebbal, Mysore-570017. Email:mahilavishesha15@gmail.com Web:www.mahilavishesha.in Editor:H.V.Venkatasubbarao Mob: 8880334444 / 9243584444 RNI No:KARKAN/2015/71642